ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೩, ಸಂಚಿಕೆ ೪, ಸೆಪ್ಟೆಂಬರ್ ೨೦೧೫

ಗಾರೀ ಗಣೇಶ ಹಬ್ಬಕ್ಕೆ

ಆಸ್ಟ್ರೇಲಿಯಾದ

ವ್ಯಾಟಲ್ ಬ್ಲಾಸಮ್

ವ್ಯಾಟಲ್ ಬ್ಲಾಸಮ್ - ಕಿರುಪರಿಚಯ - ಪುಟ ೯

ಕೇಲ್ ಸೊಪ್ಪು

ಆಹಾರ ಆರೋಗ್ಯ - ಪುಟ ೫

- ರಾಜೇಶ್ವರಿ ಜಯದೇವ್

ಕರ್ನಾಟಕದ ರಾಜವಂಶಗಳು

ಕೊನೆಯ ಕಂತು - ಪುಟ ೧೩

- ನಾಗಶೈಲ ಕುಮಾರ್

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿಯ ವರದಿಗಳು ... ಪು. ೨

ಚಿಲುಮೆಯ ಒಳಗೆ

ಆಹಾರ-ಅರೋಗ್ಯ ... ಪು. ೫

ರಾಂ ರಾಮ! ಹಾಸ್ಯ ... ಪು. ೭

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೧೦

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೨

ಕರ್ನಾಟಕದ ರಾಜವಂಶಗಳು ... ಪು. ೧೩

ಚಿಲುಮೆಯ ಒಳಗೆ

ಶುಂಟಿ ಕಷಾಯ (ಕಥೆ) ... ಪು. ೧೪

ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೧೬

ಕನ್ನಡದ ಒಂದು ಕಾಯಕಕ್ಕೆ ಮನವಿ

ಪುಟ ೧೭

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

"ಬದುಕು ನಿಂತ ನೀರಲ್ಲ, ಹರಿವ ಜಲವು. ಹೀಗಾಗಿ ಪಾದರಸದಂತೆ ನಮ್ಮನ್ನು ತೊಡಗಿಸಿಕೊಂಡಾಗ ಜೀವನವು ವೈವಿಧ್ಯತೆಯಿಂದ ಕೂಡಿರುತ್ತದೆ. ಬದುಕು ಹಸನಾಗುತ್ತದೆ". ಇಂತಹ ಮಾತುಗಳನ್ನು ಹಲವು ರೀತಿಗಳಲ್ಲಿ ಪದೇ ಪದೇ ನಾವುಗಳು ಕೇಳಿರಬಹುದು. ಆ ಕ್ಷಣದಲ್ಲಿ ಆ ಉಕ್ತಿಯು ನಿಜವೆನಿಸಿ, ಮೈಯ್ಯಲ್ಲಿ ರೋಮಾಂಚನ ತರಿಸುವುದು ಹೆಚ್ಚೇನಲ್ಲ. ಆದರೆ, ಆ ವಾಕ್ಯದ ಅರ್ಥವನ್ನು ಗ್ರಹಿಸಿ, ಜೀವನದಲ್ಲಿ ಅಳವಡಿಸಿಕೊಂಡು ಬದುಕನ್ನು ಹಸನಾಗಿ ಮಾಡಿಕೊಂಡರೆ, ಆ ಬಾಳ್ಮೆಯೇ ಸಕಲ ಸೌಭಾಗ್ಯವು.

ಹಾಗೆಂದು, ಬರೀ ಯುಕ್ತಿಯುಕ್ತವಾದ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಕಠಿಣ ಪರಿಶ್ರಮ ಮಾತ್ರವೇ ಬದುಕಾಗಬೇಕಾಗಿಲ್ಲ! ಸುತ್ತ ಮುತ್ತಲಿನ ಜನರೊಡನೆ ಬೆರೆಯಲು ಅದೆಷ್ಟು ಹಬ್ಬಗಳಿಲ್ಲ ನಮ್ಮಲ್ಲಿ. ಭಕ್ತಿ ನೆಪ ಮಾತ್ರ. ನಿಜಕ್ಕೂ ಹಬ್ಬಗಳ ಕಾಲದಲ್ಲಿ ಎಲ್ಲ ಗೊಣಗಾಟಗಳ ನಡುವೆಯೂ ನಗು ಚಿಮ್ಮಿ ತುಳುಕುತ್ತಿರುತ್ತದೆ ಎಂದು ನಾವೆಲ್ಲ ಕಂಡಿರುತ್ತೇವೆ. ಆ ಸಡಗರ, ಮಕ್ಕಳ ಆಟ-ಓಟ, ಬಗೆ ಬಗೆಯ ಅಡುಗೆಗಳು ಇತ್ಯಾದಿ. ಇಂತಹ ನವರಸಯುಕ್ತವಾದ ನಿಮಿಷದಲ್ಲಿ ಎಲ್ಲರೂ ಒಂದುಗೂಡಿ, ಇನ್ನೆಲ್ಲಿಯೂ ಇಲ್ಲ ಸಂಭ್ರಮ, ನಾವುಗಳೇ ಆ ಸಂಭ್ರಮವು ಎನ್ನುವಂತಿರುತ್ತೇವೆ. ಎಲ್ಲಿದೆ ಇಲ್ಲಿ ಯುಕ್ತಿಗೆ ಸ್ಥಳ. ಬಹುಷಃ ಇರಲೂ ಬಾರದು. ಹೃದಯ ತುಂಬಿ ತುಳುಕಬೇಕಾದರೆ ಮನಸ್ಸು ಖಾಲಿಯಾಗಿರಬೇಕು ಎನ್ನುತ್ತದೆ ಒಂದು ಹಿರಿನುಡಿ. ಇಲ್ಲದಿದ್ದರೆ, "ಒಹ್! ಅದು ಹೀಗೆ", "ಇದು ಯಾಕೆ ಮಾಡಬೇಕು", "ಅವರು ಸರಿಯಿಲ್ಲ, ನಾವು ಮಾತ್ರ ಸರಿ" ಇತ್ಯಾದಿಗಳನ್ನು ಯೋಚಿಸತೊಡಗುತ್ತದೆ ಮನವು. ಸಂಭ್ರಮದ ಆಚರಣೆಯಲ್ಲಿ ಸಂಭ್ರಮಕ್ಕೆ ಮಹತ್ವವಿರಬೇಕೇ ಹೊರತು, ಯಾಕೆ, ಏನು, ಎತ್ತ ಎಂಬ ಪ್ರಶ್ನೆಗಳಿಗಲ್ಲ. ಆ ಪ್ರಶ್ನೆಗಳಿಗೆ ಬೇರೆ ಯಾವಾಗಲಾದರೂ ಉತ್ತರ ಕಂಡುಕೊಳ್ಳಬಹುದು.

ಶ್ರಾವಣಾದಿ ಹಬ್ಬಗಳಲ್ಲಿ ಸಿಗುವ ಸಂತೋಷವನ್ನು ಉಂಡು, ಬಾಳಿನಲ್ಲಿ ಒಂದಷ್ಟು ನೆಮ್ಮದಿಯನ್ನು ತಂದುಕೊಂಡರೆ ಅದೆಷ್ಟು ಸುಂದರ ನಮ್ಮ ಜೀವನಪಥವಲ್ಲವೇ! ತೋರಿಕೆಯ ಯುಕ್ತಿ, ತತ್ವ, ಸಿದ್ಧಾಂತ, ಭಕ್ತಿಗಳನ್ನು ಪಕ್ಕಕ್ಕಿಟ್ಟು ಸಮಷ್ಟಿಯೂ ಸುಖವಾಗಿರಲಿ ಎಂದು ಆಶಿಸುತ್ತ ಬಾಳನ್ನು ಸಂಭ್ರಮಿಸೋಣ. ಹಬ್ಬಗಳ ಸಾಲಿನ ಶುಭಾಶಯಗಳೊಂದಿಗೆ ... ▪

ಎರಡು ತಿಂಗಳ ಪ್ರಮುಖ ದಿನಗಳು

ಸೆಪ್ಟೆಂಬರ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ/ಭಾದ್ರಪದ ಮಾಸ

01 ಮಂ - ಮಂಗಳ ಗೌರಿ ವ್ರತ, ಸಂಕಷ್ಟ ಚತುರ್ಥಿ
05 ಶ - ಶ್ರೀ ಕೃಷ್ಣ ಜನ್ಮಾಷ್ಟಮಿ
08 ಮಂ -ಮಂಗಳ ಗೌರಿ ವ್ರತ, ಅಜಾ ಏಕಾದಶಿ
12 ಶ - ಬೆನಕನ ಏಕಾದಶಿ 13 ಭಾ - ಅಮಾವಾಸ್ಯೆ
14 ಸೋ - ಭಾದ್ರಪದ ಮಾಸ ಆರಂಭ
15 ಮಂ - ಸರ್ ಎಂ ವಿಶ್ವೇಶ್ವರಯ್ಯನವರ ಜನ್ಮ ದಿನ
16 ಬು - ಸ್ವರ್ಣ ಗೌರಿ ವ್ರತ 17 ಗು - ಗಣೇಶ ಚತುರ್ಥಿ
24 ಗು - ಬಕ್ರೀದ್, ಏಕಾದಶಿ
27 ಭಾ - ಅನಂತಪದ್ಮನಾಭ ವ್ರತ
28 ಸೋ - ಅನಂತನ ಹುಣ್ಣಿಮೆ/ಪಿತೃ ಪಕ್ಷ ಆರಂಭ

ಅಕ್ಟೋಬರ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ/ಭಾದ್ರಪದ ಮಾಸ

01 ಗು - ಸಂಕಷ್ಟ ಚತುರ್ಥಿ 02 ಶು - ಗಾಂಧಿ ಜಯಂತಿ
08 ಗು - ಇಂದಿರಾ ಏಕಾದಶಿ
12 ಸೋ - ಮಹಾಲಯ ಅಮಾವಾಸ್ಯೆ
13 ಮಂ - ನವರಾತ್ರಿ ಆರಂಭ, ಆಶ್ವಯುಜ ಮಾಸ ಆರಂಭ
15 ಗು - ಮುಸ್ಲಿಂ ಹೊಸವರ್ಷ
19 ಸೋ - ಸರಸ್ವತಿ ಪೂಜೆ 21 ಬು - ದುರ್ಗಾಷ್ಟಮಿ
22 ಗು - ಮಹಾನವಮಿ, ಆಯುಧ ಪೂಜೆ
23 ಶು - ವಿಜಯ ದಶಮಿ/ಏಕಾದಶಿ
24 ಶ - ಮೊಹರಂ ಹತ್ತನೇ ದಿನ
27 ಮಂ - ಮಹರ್ಷಿ ವಾಲ್ಮೀಕಿ ಜಯಂತಿ

ಇದೇ ತಿಂಗಳ ೧೫ರಂದು ನಾವು ಸ್ವಾತಂತ್ರ ದಿನಾಚರಣೆಯನ್ನು ವಿಭಿನ್ನ ರೀತಿಯಲ್ಲಿ ದಾಸವಾಣಿಯನ್ನು ಕೇಳುವ ಮೂಲಕ ಆಚರಿಸಲಾಯಿತು. ಬಾಗಲಕೋಟೆಯ ಶ್ರೀ ಅನಂತ ಕುಲಕರ್ಣಿಯವರು ತಮ್ಮ ಕಂಚಿನ ಕಂಠದಿಂದ ದಾಸವಾಣಿ ಎಂಬ ಅಮೃತವನ್ನು ನಮಗೆ ಬಡಿಸಿದರು. ಅವರ ಜೊತೆಯಲ್ಲಿ ಶ್ರೀ ರಾಜಗೋಪಾಲ ಕಲ್ಲೂರಕರ ಅವರ ತಬಲ ಸಾಥಿ ಅದ್ಭುತವಾಗಿತ್ತು. ನಮ್ಮ ಸ್ಥಳೀಯ ಕಲಾವಿದರಾದ ಶ್ರೀ ಕೋದಂಡರಾಮ ಕುಡುವ ಮತ್ತು ಶ್ರೀಮತಿ ಪೂರ್ಣಿಮಾ ಕುಡುವ ಅವರು ಹಾರ್ಮೋನಿಯಂ ಮತ್ತು ತಾಳದಲ್ಲಿ ನಮಗೆ ರಸಾನುಭವವನ್ನು ನೀಡಿರುವುದು ವಿಶೇಷ. ಕಾರ್ಯಕ್ರಮದ ನಿರೂಪಣೆ ಶ್ರೀಮತಿ ಪೂರ್ಣಿಮಭಟ್ ಅವರು ಸೊಗಸಾಗಿ ನಿರ್ವಹಿಸಿದರು.

ಮೊದಲಿಗೆ ಕು.ಸಿಂಧು ತನ್ನ ಇಂಪಾದ ಕಂಠದಿಂದ ಗಣಪನ ಕೀರ್ತನೆಯೊಂದಿಗೆ ನಾಂದಿ ಹಾಡಿದಳು. ನಂತರ, ಪಾಂಡುರಂಗನ ಪ್ರಾರ್ಥನೆಯಿಂದ ದಾಸವಾಣಿ ಕಾರ್ಯಕ್ರಮವನ್ನು ತಾರತಮ್ಯದ ರೀತಿಯಲ್ಲಿ ಆರಂಭಿಸಿದರು. ಅನಂತ ಕುಲಕರ್ಣಿಯವರು ಹಾಡಿದ ಗೀತೆಗಳಾದ ತುಂಗಾ ತೀರದಿ ನಿಂತ ಯತಿವರ, ಕೈಲಾಸವಾಸ ಗೌರೀಶಈಶ, ಯಾಕೆ ಮೂಕನಾದ್ಯೊ ಗುರುವೇ ಪಂಡಿತ್ ಭೀಮಸೇನ ಜೋಷಿಯವರ ನೆನಪಾಯಿತು. ಬಾಗಲಕೋಟೆ ಪ್ರಸನ್ನ ವೆಂಕಟದಾಸರ ಜೀವನ ಚರಿತ್ರೆಯನ್ನು ಸಭಿಕರಿಗೆ ತಿಳಿಸಿ ಅವರ ರಚನೆಯಾದ ಎಂತಾ ಶ್ರೀಮಂತನಂತಾನೋ ಎಂಬ ಹಾಡು ಪದಪುಂಜದ ಅದ್ಭುತ ಚಮತ್ಕಾರವನ್ನು ಸವಿಯುವ ಹಾಗೆ ಆಯಿತು. ವಿಜಯದಾಸರ ರಚನೆಯಾದ ಶಂಭೋ ಸ್ವಯಂಭೋ ಸಂಭವ, ಉಮಾಕಾತ್ಯಾಯಿನಿ ಗೌರಿ, ಶ್ರೀಶ ನಿನ್ನ ಉದಾಸೀನ ಮಾಡದೆ, ಬಾಬಾ ಭಕುತರ ಹೃದಯ ಮಂದಿರ ತುಂಬಾ ಚೆನ್ನಾಗಿ ಮೂಡಿಬಂದಿತು.

ವಾಟಲ್ ಗ್ರೂವ್ ಶಾಲೆಯ ಸಭಾಂಗಣದಲ್ಲಿ ಕಿಕ್ಕಿರುದು ತುಂಬಿದ್ದ ಜನಸಂದಣಿಗೆ ಮೊದಲನೇ ಬಾರಿಗೆ ವಿಶೇಷವಾಗಿ ಆಲಿಸಲಿಕ್ಕೆ ದೊರಕಿದಂತ ಹರಿದಾಸರ ಪದಗಳು ಶಿವನೇ ನಾ ನಿನ್ನ ಸೇವಕನಯ್ಯ, ಬೇಡುವರೋ ಸುಖವ, ಭಿನ್ನೈಪೆ ನಿನಗೆ ಭೀಮಸೇನ, ಅಂತರಂಗದಲ್ಲಿ ಹರಿಯ ಕಾಣದವ ಹುಟ್ಟು ಕುರುಡನು. ಉತ್ತರ ಕರ್ನಾಟಕದ ಶೈಲಿಯಲ್ಲಿ ವೇಗವಾಗಿ ಪದಗಳ ಉಚ್ಚಾರಣೆಯನ್ನು ಮಾಡಿ ಪ್ರೇಕ್ಷಕರಿಗೆ ಹಾಡಿನ ವಿವರಣೆಯನ್ನು ನೀಡುವುದು ಮತ್ತು ಹಸನ್ಮುಖರಾಗಿ ಹಾಡುವುದು ಅನಂತಕುಲಕರ್ಣಿಯವರ ವಿಶೇಷ.

ಪುರಂದರದಾಸರ ರಚನೆಯಾದ ಹೇ ರುಕ್ಮಿಣಿ ಏನು ಮರುಳಾದೆಯಮ್ಮ ಮತ್ತು ಭಾಗ್ಯದ ಲಕ್ಷ್ಮಿಬಾರಮ್ಮ ಈ ಹಾಡುಗಳು ವಿಭಿನ್ನವಾಗಿ ಕೇಳುವ ಅವಕಾಶ ನಮಗೆ ದೊರೆಯಿತು. ಶ್ರೀ ಪಾದರಾಜರು ರಚಿಸಿರುವ ವಂದಿಪೆ ನಿನಗೆ ಗಣನಾಥ ಮತ್ತು ಕುಣಿದಾಡೆ ಎನ್ನ ನಾಲಿಗೆ ಮ್ಯಾಲೆ ಈ ಹಾಡುಗಳು ಗಣಪತಿ ಮತ್ತು ಶಾರದೆಯ ಬಗ್ಗೆ ಭಕ್ತಿಯನ್ನು ಹೆಚ್ಚಿಸಿತು. ಶಾರದೆ ಹಾಡು ಕೇಳಿದ ನಮಗೆಲ್ಲರಿಗೂ ನಿಜವಾಗಿಯೂ ತಾಯಿ ಸರಸ್ವತಿ ಅನಂತಕುಲಕರ್ಣಿಯವರ ನಾಲಿಗೆ ಮೇಲೆ ಕುಣಿದಾಡಿದೆಂತೆನಿಸಿತು. ಕನಕದಾಸರ ವೈರಾಗ್ಯ ಪದವಾದ ಆರು ಸಂಗಡ ಬಾಹೋರಿಲ್ಲ ಇದು ಬೆಚ್ಚು ಬೀಳಿಸುವಂತಹ ಜೀವನದ ಸತ್ಯವನ್ನು ನಮಗೆ ಅರಿಯುವಂತೆ ಮಾಡಿತು.

ಸಿಡ್ನಿ ಕನ್ನಡ ಶಾಲೆಯು ಹರಿದಾಸರ ಪದಗಳನ್ನು ಆನ್‌ಲೈನ್ ಮೂಲಕ ಎಲ್ಲರಿಗೂ ಸಿಗುವಂತೆ ಮಾಡುವ ಕಾರ್ಯಕ್ರಮವನ್ನು ಶಾಲೆಯ ಸಂಸ್ಥಾಪಕರಾದ ಶ್ರೀ ನಾರಯಣ ಕನಕಾಪುರರವರು ಶ್ರೀ ಅನಂತಕುಲಕರ್ಣಿಯವರಿಂದ ಉದ್ಘಾಟನೆ ಮಾಡಿಸಿದರು. ಪಂಡಾರಪುರದ ವಿಠಲನ ಕುರಿತಾಗಿರುವ ಮರಾಠಿ ಅಭಂಗವನ್ನು ಕೇಳಿ ಆನಂದಿಸಿದೆವು. ದಾಸವಾಣಿಯ ಕಾರ್ಯಕ್ರಮದ ಕೊನೆಯ ಹಾಡು ಕೈ ಮೀರಿ ಹೋದ ಮಾತಿಗೆ ಮರುಗಬಾರದು ಎನ್ನುವುದು ತತ್ವಪದ. ರಾಜ್‌ಗೋಪಾಲರವರ ಸೋಲೋ ತಬಲಾವಾದನ ಸಭಿಕರನ್ನು ರಂಜಿಸಿತು.

ದಾಸವಾಣಿ ಕಾರ್ಯಕ್ರಮದ ಆಯೋಜಕರಾದ ಸಿಡ್ನಿ ಕನ್ನಡ ಶಾಲೆ ಮತ್ತು ಶ್ರೀ ರಾಘವೇಂದ್ರ ಭಕ್ತಮಂಡಳಿಯ ಪರಿಶ್ರಮ ಸಾರ್ಥಕವಾಯಿತು. ▪

ಎರಡು ವಾರ, ಎರಡು ವಿಭಿನ್ನ ಕನ್ನಡ ಚಿತ್ರಗಳು ಸಿಡ್ನಿಯಲ್ಲಿ ಜನರ ಮನರಂಜನೆಗೆ ಸಿಕ್ಕಿದ್ದು ವಿಶೇಷ. ಮೊದಲನೆಯದು ರಂಗಿತರಂಗ. ಹೆಸರೇ ಏನೋ ವಿಶೇಷವಾಗಿದ್ದು, ನೋಡುವ ಮೊದಲೇ ಜನರ ಕುತೂಹಲ ಕೆರಳಿಸಿತ್ತು. ಟ್ರೇಲರ್ ನೋಡಿದ್ರೆ ಕಥೆ ಮುಂದೆ ಏನಿರಬಹುದು, ಭಯಾನಕವೋ, ಭೂತವೋ ಇರಬೇಕು ಅನ್ನಿಸುವಂತೆ ತೋರಿಸಿದ್ದರು. ಸಿಡ್ನಿಯಲ್ಲಿ ಕನ್ನಡ ಸಿನಿಮಾ ಈಗ ಸಾಮಾನ್ಯವಾಗಿ ಹೋಗಿದೆ. ಟಿಕೆಟ್ ಪಡೆದುಕೊಳ್ಳುವುದು ಸುಲಭ, ನೂಕು ನುಗ್ಗಲು ಇಲ್ಲದೆ ಚಿತ್ರ ಮಂದಿರದೊಳಗೆ ಕಾಲಿಡುವುದು ಸುಲಭ. ಆದರೆ ಹೀರೋ ಕಟ್ ಔಟ್, ಹೂವಿನ ಅಲಂಕಾರ, ಜೈಕಾರ ತರಹದ ವಿಶೇಷ ಮೆರುಗು ಇರುವುದಿಲ್ಲ ಭಾರತದ ಚಿತ್ರ ಮಂದಿರಗಳ ರೀತಿ.

ರಂಗಿತರಂಗ ಚಿತ್ರಕ್ಕೆ ಟಿಕೆಟ್ ಬುಕ್ ಮಾಡಲೋ ಬೇಡವೋ ಎಂಬ ಭಯ ನನಗೆ. ಚಿತ್ರ ನೋಡಿ ಹೆದರಿ ಮನೆ ದಾರಿ ಒಬ್ಬಳೇ ಹೇಗೆ ಹಿಡಿಯುವುದು ಎಂಬ ಚಿಂತೆ. ಆದರೂ ದಿನ ಪತ್ರಿಕೆಗಳಲ್ಲಿ ಓದಿದ ಚಿತ್ರ ವಿಮರ್ಶೆ ಬಹು ಆಕರ್ಷಣೆ ಹುಟ್ಟಿಸಿತ್ತು. ಯೂಟ್ಯೂಬಿನಲ್ಲಿ ಏರಿದ ಹಾಡುಗಳು, ಕಥೆ ನೋಡಿ ಧೈರ್ಯ ಮಾಡಿ, ಟಿಕೆಟ್ ಬೇಕೆಂದು ಮೆಸೇಜ್ ಮಾಡೇ ಬಿಟ್ಟೆ. ಸಾರೀ ಹೌಸ್‌ಫುಲ್ ಅಂತ ಮೆಸೇಜ್ ನೋಡಿ ಸ್ವಲ್ಪ ಬೇಜಾರಾದರೂ, ಮನಸ್ಸಿನ ಮೂಲೆಯಲ್ಲಿ ಅಬ್ಬ ಭಯ ಪಟ್ಟುಕೊಳುವಷ್ಟು ಇಲ್ಲ ಅಂತ ವಿಚಿತ್ರ ಸಮಾಧಾನ.

ಎರಡು ದಿನ ಕಳೆದು ಫೇಸ್ ಬುಕ್ ನೋಡುತ್ತೇನೆ, ಮತ್ತೊಂದು ಶೋ ರಂಗಿತರಂಗ !!! ಈ ಬಾರಿ ನನಗೆ ಟಿಕೆಟ್ ಅನಾಯಾಸವಾಗಿ ಲಭಿಸಿತ್ತು. ಭಾನುವಾರ ಮಧ್ಯಾನ್ಹ ಒಬ್ಬಳೇ ಹೊಗಿ, ಚಳಿಗಾಲದ ರಾತ್ರಿ ಒಬ್ಬಳೇ ಬರುವುದೇ, ಸ್ವಲ್ಪ ದಿಗಿಲೆನಿಸಿ, ಗೆಳತಿಯೊಬ್ಬಳಿಗೆ ಫೋನಾಯಿಸಿ, ಬಾರಮ್ಮ ನನ್ನ ಜೊತೆ " ರಂಗಿತರಂಗ " ನೋಡಲು, ನನಗೆ ಭಯವಾದಲ್ಲಿ ನಿನ್ನ ಕೈ ಹಿಡಿಯುತ್ತೇನೆ ಎಂದೆ. ನಕ್ಕಳಾ ಗೆಳತಿ ಒಪ್ಪಿದಳು.

ಟಿಕೆಟ್ ಕೌಂಟರ್ ನಲ್ಲಿ ನಿಂತ ಕೆಲವರು "ಮೇಡಂ ಭಯ ಆದವರಿಗೆ ತಾಯಿತ ಕಟ್ಟುತ್ತಾ ಇದ್ದಾರೆ ಅಂತ ತಮಾಷೆ ಬೇರೆ". ಸಿನಿಮಾ ಶುರು ಆದಾಗಿನಿಂದ ಒಂದು ವಿಚಿತ್ರ ಕುತೂಹಲ, ಅನೇಕ ಪ್ರಶ್ನೆಗಳನ್ನು ಮೂಡಿಸುವಲ್ಲಿ ನಿರ್ದೇಶಕ ಅನುಪ್ ಭಂಡಾರಿ ಸಫಲವಾಗಿದ್ದಾರೆ. ಚಿತ್ರದ ಪ್ರಮುಖ ಪಾತ್ರದಲ್ಲಿ ನಿರುಪ್ ಭಂಡಾರಿ, ಅವನಿಕಾ ಶೆಟ್ಟಿ, ರಾಧಿಕಾ ಚೇತನ್. ಎಲ್ಲರೂ ಹೊಸಬರಾದರೂ ಕೂಡ ನಟನೆ ಬಹಳ ನೈಜವಾಗಿತ್ತು. ಇನ್ನೊಂದು ಪಾತ್ರ ಪೋಸ್ಟ್ ಮಾಸ್ತರ್ ಅವರದು ಸಾಯಿ ಕುಮಾರ್ ಮತ್ತು ಅವರ ಕಾವ್ಯಮಯ ಸಂಬಾಷಣೆ ಇಷ್ಟವಾಗುತ್ತೆ. ಮತ್ತೊಂದು ಮುಖ್ಯ ಆಕರ್ಷಣೆ ಸಿನಿಮಾಟೋಗ್ರಫಿ ಹಾಲಿವುಡ್ನ ಲಾನ್ಸ್ ಕ್ಯಾಲ್ವನ್. ನಮ್ಮ ಕಣ್ಣ ಮುಂದೆಯೇ ನಡೆಯುತ್ತಿದೆಯೇನೋ ಎಂಬ ಭಾವನೆ ಬರುವಷ್ಟು ಚೆನ್ನಾಗಿತ್ತು.

ಚಿತ್ರದ ಕಥೆಯಲ್ಲಿ ನಾಯಕ ಗೌತಮ್ ಮತ್ತು ಅವನ ಹೆಂಡತಿ ಇಂದು ಕಮರೊಟ್ಟು ಎಂಬ ಗ್ರಾಮಕ್ಕೆ ಭೂತಾರಾಧನೆಗೆಂದು ಬರುತ್ತಾರೆ. ಅಲ್ಲಿಂದ ಅವರಿರುವ ಮನೆಯಲ್ಲಿ ವಿಚಿತ್ರ ಸಂಗತಿಗಳು ನಡೆಯುತ್ತಾ ಸಾಗುತ್ತವೆ. ನಾಯಕ ಅದರ ಜಾಡು ಹಿಡಿದು ಹೋದಾಗ ಬೇರೆ ಬೇರೆ ವಿಷಯಗಳು ಅನಾವರಣಗೊಳ್ಳುತ್ತವೆ. ಹೆಂಡತಿ ಕಾಣೆಯಾಗುತ್ತಾಳೆ. ನಾಯಕನ ಹುಡುಕಿಕೊಂಡು ಇನ್ನೊಂದು ಸ್ತ್ರೀ ಪಾತ್ರ, ಅವಳ್ಯಾರು, ಯಾಕೆ ಹುಡುಕುತ್ತಿದ್ದಾಳೆ, ಯಾರನ್ನು ಹುಡುಕುತಿದ್ದಾಳೆ ಎಂಬ ಪ್ರಶ್ನೆ ಕಾಡುವಾಗಲೇ, ಕಥೆ ವಿಚಿತ್ರ ತಿರುವಿನಿಂದ ಪ್ರೇಕ್ಷಕನ ಕುತೂಹಲ ಇಮ್ಮಡಿಗೊಳಿಸುತ್ತೆ.

ಚಿತ್ರದಲ್ಲಿನ ಕಮರೊಟ್ಟು ಮನೆ ನೋಡಿದಾಗ, ಬಹಳ ವರ್ಷದ ಹಿಂದೆ ದೂರದರ್ಶನದಲ್ಲಿ ಬರುತ್ತಿದ್ದ " ಗುಡ್ಡದ ಭೂತ " ಧಾರಾವಾಹಿಯಾ ಎನಿಸಿತ್ತು, ಆದರೆ ಮೂಲ ಕಥೆ ಬೇರೆಯೇ ಆಗಿ ಹೆಣೆದಿದ್ದಾರೆ. ಅದೇ ಧಾರಾವಾಹಿಯ ಹಾಡೊಂದು : ದೆನ್ನಾನ ದೆನ್ನಾನ " ಅಳವಡಿಸಿಕೊಂಡಿದ್ದಾರೆ. ಸಂಗೀತ ನಿರ್ದೇಶನ ಕೂಡ ಅನುಪ್ ಭಂಡಾರಿಯವರದೇ. ಅಕ್ಕ- ಪಕ್ಕ ಎಂಬ ಹಾಡು ಚಿತ್ರ ಮುಗಿದ ಮೇಲೂ ಗುನುಗುವ ಹಾಗೆ ಮಾಡುತ್ತೆ.

ರಂಗಿತರಂಗ ಒಂದೇ ಸಾಲಿನಲ್ಲಿ ಹೇಳಬೇಕೆಂದರೆ, ಪ್ರೇಮ, ಪ್ರಣಯ, ಭಯ, ರಹಸ್ಯ ಮಿಶ್ರಿತ ಅದ್ಭುತ ಸಿನಿಮಾ. ಕನ್ನಡ ಚಿತ್ರರಂಗದ ಹೊಸ ಪ್ರಯತ್ನಗಳನ್ನು ವೀಕ್ಷಕರು ಚೆನ್ನಾಗಿಯೇ ಸ್ವಾಗತಿಸಿದ್ದಾರೆ ಮತ್ತು ಸ್ವೀಕರಿಸಿದ್ದಾರೆ !!! ▪

ಮತ್ತೊಂದು ವಿಭಿನ್ನ ಚಿತ್ರ " ನಾನು ಅವನಲ್ಲ ಅವಳು " ಮೆಲ್ಬೋರ್ನ್ ಫಿಲಂ ಫೆಸ್ಟಿವಲ್ ನಲ್ಲಿ ಪ್ರದರ್ಶನ ಕಂಡ ಮೇಲೆ ಸಿಡ್ನಿ ಕನ್ನಡಿಗರಿಗೆ ನೋಡಲು ದೊರೆಯಿತು.ಇದು "ಲಿವಿಂಗ್ ಸ್ಮೈಲ್ ವಿದ್ಯಾ " ಅವರ ಆತ್ಮ ಕಥೆ " ಐ ಯಾಮ್ ವಿದ್ಯಾ " ಆಧಾರಿತ.

ನಾವು ಪುರಾಣ ಕಥೆಗಳಲ್ಲಿ ಅರ್ಜುನ ಬೃಹನ್ನಳೆ ಆದ ಕಥೆ ಓದಿದ್ದೇವೆ. ಬೆಂಗಳೂರಿನ ಕೆಲವೆಡೆ ಶಿಕಂಡಿ ಎಂದು ಕರೆಯಲ್ಪಡುವ ವಿಚಿತ್ರ ಹೆಣ್ಣೂ ಅಲ್ಲದ ಗಂಡೂ ಅಲ್ಲದ ಜನಾಂಗವನ್ನು ನೋಡಿದ್ದರೂ, ಅವರ ಜೀವನದ ಕಡೆಗೆ ಎಂದೂ ಸೂಕ್ಷ್ಮ ದೃಷ್ಟಿ ಬೀರಿರುವುದಿಲ್ಲ. ಅಂಥವರುಗಳನ್ನು ಸಮಾಜ ಒಪ್ಪದೇ, ಅವರದೇ ಆದ ಗುಂಪು ಕಟ್ಟಿಕೊಂಡು, ಭಿಕ್ಷೆ ಬೇಡಿಕೊಂಡು, ಅಥವಾ ವೇಶ್ಯಾವಾಟಿಕೆಯಲ್ಲಿ ಭಾಗಿಯಾಗಿ ಜೀವನ ನಡೆಸುವ ಅವರ ಜೀವನವನ್ನು B.S. ಲಿಂಗದೇವರು ಅವರು ಪರದೆ ಮೇಲೆ ತಂದಿದ್ದಾರೆ. ಮುಖ್ಯ ಪಾತ್ರದಲ್ಲಿ " ಸಂಚಾರಿ ವಿಜಯ್ " ಇದ್ದು, ವೀಕ್ಷಕರಿಗೆ ಅವರು ಹೆಣ್ಣಿನ ಭಾವೋದ್ವೇಗವನ್ನು ನೈಜವಾಗಿ ನಟಿಸಿ ಶಭಾಸ್ ಗಿರಿ ಪಡೆದಿದ್ದಾರೆ. ಇವರಿಗೆ ಅತ್ಯುತ್ತಮ ನಟನೆಗೆ ರಾಷ್ಟ್ರ ಪ್ರಶಸ್ತಿ ಕೂಡ ಬಂದಿದೆ.

ಕಥೆಯ ನಾಯಕ ಮಾದೇಶ ಚಿಕ್ಕದಿನಿಂದ ಹೆಣ್ಣಿನ ಬಯಕೆ, ಹಾವ ಭಾವ ಬೆಳೆಸಿಕೊಂಡು, ಮನೆಯವರಿಂದ ಮತ್ತು ನೆರೆ ಹೊರೆಯವರಿಂದ ಹಾಸ್ಯಕ್ಕೀಡಾಗಿರುತ್ತಾನೆ. ಇದರಿಂದ ಬೇಸತ್ತು, ಬೆಂಗಳೂರಿನ ಅಕ್ಕನ ಮನೆಗೆ ಬಂದು, ಅಲ್ಲಿ ತನ್ನ ರೀತಿಯೇ ಹುಟ್ಟಿದ ಕೆಲವರ ಪರಿಚಯವಾಗಿ ಸ್ವಲ್ಪವಾದರೂ ಸಂತೋಷ ಕಂಡುಕೊಳ್ಳುತ್ತಾನೆ. ಆದರೆ ತನ್ನ ಈ ದ್ವಂದ ಬದುಕನ್ನು ಬಿಟ್ಟು ಸಂಪೂರ್ಣವಾಗಿ ಹೆಣ್ಣಾಗಿ ಪರಿವರ್ತನೆ ಹೊಂದುವ ಆಸೆಯಲ್ಲಿ ಪುಣೆಗೆ ಹೋಗುತ್ತಾನೆ. ಅಲ್ಲಿರುವ ಗುಂಪಿನ ಜನದ ಜೊತೆಗೆ ಸೇರಿ ಭಿಕ್ಷೆ ಬೇಡುವ ಕಾಯಕಕ್ಕೆ ಇಳಿಯುತ್ತಾನೆ. ವಿದ್ಯೆ ಇದ್ದರೂ ಅವನ ವಿಚಿತ್ರ ವ್ಯಕ್ತಿತ್ವಕ್ಕೆ ಯಾರೂ ಬೆಲೆ ಕೊಡದೆ, ಮನಸ್ಸಿಗೆ ಹಿಂಸೆ ಪಟ್ಟುಕೊಳ್ಳುತ್ತಾನೆ. ಅಲ್ಲಿಯ ಗುಂಪಿನ ಒಡತಿಯ ಸಹಾಯದಿಂದ ತಾನು ಸಂಪೂರ್ಣವಾಗಿ ಗಂಡಿನ ಜೀವನಕ್ಕೆ ಅಂತ್ಯ ಹಾಡುತ್ತಾನೆ.

ಅಪ್ಪ ಅಮ್ಮ ಮತ್ತು ಅಕ್ಕನ ನೋಡುವ ಆಸೆಯಾಗಿ ಊರಿಗೆ ಹೋದಾಗ, ಅಲ್ಲಿ ನಡೆಯುವ ಭಾವನಾತ್ಮಕ ಸಂಭಾಷಣೆ ನೋಡುಗರ ಮನ ಕಲಕುವಂತಿರುತ್ತೆ. ಅಪ್ಪ ಮತ್ತು ಅಮ್ಮ ಎಲ್ಲರ ತಿರಸ್ಕಾರಕ್ಕೆ ಗುರಿಯಾಗಿ ಮತ್ತೆ ಬೆಂಗಳೂರಿಗೆ ಬರುತ್ತಾನೆ. ಎಲ್ಲಿಯೂ ನೌಕರಿ ಸಿಗುವುದಿಲ್ಲ. ತನ್ನ ದಾಖಲೆಗಳಲ್ಲಿ ಮಾದೇಶ ಆದರೆ ನೋಡಲು ಹುಡುಗಿಯಂತಿರುವ ವಿದ್ಯಾ. ಇವಳನ್ನು ಸಮಾಜ ಒಪ್ಪುವಂತೆ ಮಾಡುವ ಕ್ರಮ ಯಾವುದು ಎಂಬ ಗೊಂದಲ ಹುಟ್ಟಿಸಿದಾಗಲೇ, ಪೋಲಿಸ್ರು ಸ್ಟೇಷನ್ಗೆ ಎಳೆದೊಯ್ಯುತ್ತಾರೆ. ಮುಂದೆ ಕಥೆಗೆ ದೊಡ್ಡ ತಿರುವು ಸಿಗುತ್ತದೆ.....ಅದನ್ನು ಪರದೆಯ ಮೇಲೇ ನೋಡಿ ಆನಂದಿಸಬೇಕು.

ಸಿನಿಮಾದ ಚಿತ್ರೀಕರಣ ಬಹುತೇಕ ನಿಜವಾದ ಹಿಜರಾಗಳ ಕಾಲೋನಿಯಲ್ಲಿ ತೆಗೆದಿದ್ದಾರೆ. ಮೊದಲನೇ ಬಾರಿ ಕ್ಯಾಮೆರಾ ಎದುರಿಸಿದ ಅವರುಗಳು ನಟಿಸಿದ್ದು ಎಂದರೆ ತಪ್ಪಾಗುತ್ತೆ.

ಸಿನಿಮಾದ ನಂತರ ನಿರ್ದೇಶಕ ಲಿಂಗ ದೇವರು ಅವರ ಜೊತೆ ಮಾತು ಕಥೆ ನಡೆಯಿತು. ಅವರಿಗೆ ಯಾಕೆ ಈ ರೀತಿಯ ಕಥೆಯನ್ನು ಆಯ್ದರು, ಅದರ ಹಿಂದಿನ ಉದ್ದೇಶವೇನು ಎಂಬುದನ್ನು ಎರಡು ಮಾತಿನಲ್ಲಿ ವಿವರಿಸಿದರು. ಮೀಡಿಯಾ ಸುದ್ದಿ ಎಂದೂ ೧೦೦% ಸತ್ಯವಾಗಿರುವುದಿಲ್ಲ, 2009 ರಲ್ಲಿ ಹುಡುಗನೊಬ್ಬ ಬಲವಂತವಾಗಿ ಲಿಂಗ ಪರಿವರ್ತನೆ ಹೊಂದಿದ ಎಂಬುದನ್ನು ಬ್ರೇಕಿಂಗ್ ನ್ಯೂಸ್ ಮಾಡಿದ ಮೀಡಿಯಾ ಯಾವ ಸತ್ಯವನ್ನು ಬಿಚ್ಚಿಡುವುದಿಲ್ಲ ಎಂದರು. ಅದರ ವಿಷಯದ ಬಗ್ಗೆ ಪ್ರಶ್ನೆಗಳು ಎದ್ದು, ಆಳವಾಗಿ ಯೋಚಿಸಿ, ನಂತರ ಸತ್ಯ ಕಥೆ ಸಿಕ್ಕಿ ಅದನ್ನು ಸಿನಿಮಾ ಮಾಡಿದ್ದು ಎಂದು ಹೇಳಿದರು.

ಇಂಥ ಸೂಕ್ಷ್ಮ ವಿಷಯವನ್ನು ವಿಶಿಷ್ಟವಾಗಿ ಚಿತ್ರಿಸಿದ ನಿರ್ದೇಶಕರ ಬೆನ್ನು ತಟ್ಟಲೇ ಬೇಕು !! ▪

ಕೇಲ್ ಸೊಪ್ಪು

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಇತ್ತೀಚೆಗೆ ಜನಪ್ರಿಯಗೊಂಡ, ಶ್ರೇಷ್ಠ ಆಹಾರ (super food) ಎಂದು ಖ್ಯಾತಿ ಪಡೆದ ತರಕಾರಿ ಕೇಲ್. ಬ್ರಾಸಿಕೇಸಿ ಅಥವಾ ಕ್ರೂಸಿಫೆರೀ ಕುಟುಂಬಕ್ಕೆ ಸೇರಿದ ಸಸ್ಯ. ಕ್ರೂಸಿಫೆರೀ ಕುಟುಂಬಕ್ಕೆ ಸೇರಿದ ಇತರ ಜನಪ್ರಿಯ ತರಕಾರಿಗಳು – ಕೋಸು, ಹೂ ಕೋಸು, ಬ್ರೊಕಲಿ ಇತ್ಯಾದಿ. ಸಸ್ಯಶಾಸ್ತ್ರೀಯವಾಗಿ ಕೇಲ್ ನ ಹೆಸರು ಬ್ರಾಸಿಕಾ ಒಲರೇಸಿಯ ಅಸಿಫಾಲ (Brassica oleracea acephala). ಇದು ವಾರ್ಷಿಕ ಅಥವಾ ದ್ವಿವಾರ್ಷಿಕ ಬೆಳೆ. ಏಷ್ಯಾ ಮೈನರ್ ನಲ್ಲಿ ಹುಟ್ಟಿ ಕ್ರಿಸ್ತಪೂರ್ವ ಆರುನೂರರಲ್ಲಿ ಯುರೋಪಿಗೆ ಕಾಲಿಟ್ಟಿತೆಂದು ಹೇಳುತ್ತಾರೆ. ಪುರಾತನ ಗ್ರೀಕರು ಮತ್ತು ರೋಮನರು, ಸಾವಿರಾರು ವರ್ಷಗಳ ಹಿಂದೆಯೇ ಇದನ್ನು ಬೆಳೆಯುತ್ತಿದ್ದರೆಂದು ತಿಳಿದು ಬಂದಿದೆ. ಮಾರ್ಕೆಟ್ಟಿನಲ್ಲಿ ಹಲವಾರು ವಿಧದ, ನಾನಾಬಣ್ಣದ ಕೇಲ್ ದೊರೆಯುತ್ತದೆ (ಚಿತ್ರ ನೋಡಿ).

ಆರೋಗ್ಯಪೂರಕ ಮತ್ತು ಆರೋಗ್ಯದಾಯಕ ಗುಣಗಳು

ಎರಡನೇ ಮಹಾಯುದ್ಧದ ಕಾಲದಲ್ಲಿ ಆಹಾರದ ಅಭಾವದಿಂದ ಜನರು ಪೋಷಕಾಂಶಗಳ ಕೊರತೆಯಿಂದ ಬಳಲುತಿದ್ದರು. ಆಗ ಯುನೈಟೆಡ್ ಕಿಂಗ್ಡಮ್ (United Kingdom) ಸರಕಾರ ಕೇಲ್ ಸೊಪ್ಪನ್ನು ಬೆಳೆಯಲು ಜನರಿಗೆ 'ವಿಜಯಕ್ಕಾಗಿ ಆಗೆಯಿರಿ' ಆಂದೋಲನದ ('Dig for Victory' campaign) ಮೂಲಕ ಬಹಳ ಉತ್ತೇಜನ ಕೊಟ್ಟಿತಂತೆ. ಕಾರಣ: ಕೇಲ್ ಪೋಷಕಾಂಶಗಳ ಆಗರ ಮತ್ತು ಬೆಳೆಯುವುದು ಬಹು ಸುಲಭ.

ಕೇಲ್ ಸೊಪ್ಪಿನಲ್ಲಿ ಹಲವಾರು ಬಹು ಮುಖ್ಯ ಪೋಷಕಾಂಶಗಳಿವೆ ಎಂದು ಅನೇಕ ವೈಜ್ಞಾನಿಕ ಅಧ್ಯಯನಗಳಿಂದ ತಿಳಿದುಬಂದಿದೆ. ದೇಹದಲ್ಲಿ ವಿಟಮಿನ್ 'ಎ' ಆಗಿ ಮಾರ್ಪಾಡುಗೊಳ್ಳುವ ಬೀಟಾ ಕೆರೊಟಿನ್, ವಿಟಮಿನ್ 'ಕೆ' ಮತ್ತು 'ಸಿ', ಫೋಲೇಟ್, ಮಿನರಲ್ಸ್ ಗಳಾದ ಸುಣ್ಣ (ಕ್ಯಾಲ್ಸಿಯಂ) ಮತ್ತು ಕಬ್ಬಿಣ (ಐರನ್) ಗಣನೀಯ ಪ್ರಮಾಣದಲ್ಲಿವೆ. ಕೆಲ ಬಗೆಯ ನೀರಿನಲ್ಲಿ ಕರಗುವ ಹೊಟ್ಟು/ನಾರು (ಫೈಬರ್), ಹಲವಾರು ದೇಹರಕ್ಷಕ ಆಂಟಿ-ಆಕ್ಸಿಡೆಂಟ್ಸ್ ಉದಾ: ಲುಟೀನ್, ಜೆಯಾಜಾನ್ತಿನ್, ಕೆರೋಟಿನಾಯ್ಡ್ಸ್, ಫ್ಲೇವೊನಾಯ್ಡ್ಸ್ (lutein, zeaxanthin, carotenoids, flavonoids) ಗಳನ್ನು ಹೊಂದಿರುವ ಕೇಲ್, ಕೊಲೆಸ್ಟರಾಲ್ ಪ್ರಮಾಣವನ್ನು ತಗ್ಗಿಸುತ್ತದೆ, ಹೃದಯದ ರಕ್ತನಾಳಗಳನ್ನು ಸುಸ್ಥಿತಿಯಲ್ಲಿಡುತ್ತದೆ. ಕ್ರೂಸಿಫೆರಸ್ ಕುಟುಂಬಕ್ಕೆ ಸೇರಿದ ಕೇಲ್, ಕೋಸು, ಬ್ರೊಕಲಿ, ಹೊಕೋಸು ಮುಂತಾದ ತರಕಾರಿಗಳಲ್ಲಿ ಸಲ್ಫರೋಫೇನ್ ಮತ್ತು ಇಂಡೋಲ್-3-ಕಾರ್ಬಿನಾಲ್ ಎಂಬ ರಾಸಾಯನಿಕಗಳಿವೆ. ಇವು ಪ್ರಭಾವಶಾಲಿ ಕ್ಯಾನ್ಸರ್ ನಿರೋಧಕ ಗುಣಗಳನ್ನು ಹೊಂದಿವೆ. ಸಲ್ಫರ್ ಹೊಂದಿದ ಆಂಟಿ-ಆಕ್ಸಿಡೆಂಟ್ಸ್ ಗಳು ಪಿತ್ತಜನಕಾಂಗದಲ್ಲಿ (ಲಿವರ್) ಉತ್ಪನ್ನವಾಗುವ ವಿಷವನ್ನು ಹೊರಹಾಕಲು (detoxification) ಸಹಾಯಮಾಡುತ್ತವೆ.

ಶೇಖರಿಸಿಡುವುದು ಹೇಗೆ?

ಕೇಲ್ ಸೊಪ್ಪನ್ನು ಕೊಂಡುತಂದ ಕೂಡಲೇ ಉಪಯೋಗಿಸುವುದು ಉತ್ತಮ. ಅದಾಗದಿದ್ದಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಗಾಳಿಯಾಡದಂತೆ ಬಿಗಿಯಾಗಿ ಕಟ್ಟಿ, ಮೂರರಿಂದ ಐದು ದಿನಗಳು ರೆಫ್ರಿಜರೇಟರಿನಲ್ಲಿ ಅಥವಾ ಆರು ತಿಂಗಳಕಾಲ ಫ್ರೀಜರಿನಲ್ಲಿಡಬಹುದು. ಫ್ರೀಜರಿನಲ್ಲಿಟ್ಟ ಕೇಲ್ ಸೊಪ್ಪಿಗೆ ರುಚಿ ಮತ್ತು ಸುವಾಸನೆ ಹೆಚ್ಚೆಂದು ಹೇಳುತ್ತಾರೆ

ಉಪಯೋಗಿಸುವುದು ಹೇಗೆ?

ಕೇಲ್ ಸೊಪ್ಪನ್ನು ದಂಟಿನಿಂದ ಬೇರ್ಪಡಿಸಿ ಹಬೆಯಲ್ಲಿ ಐದು ನಿಮಿಷ ಅಥವಾ ಮೈಕ್ರೋವೇವ್ ಓವನ್ ನಲ್ಲಿ ಎರಡು ನಿಮಿಷ ನೀರು ಹಾಕದೆ ಬೇಯಿಸುವುದು ಉತ್ತಮ. ಅಧಿಕ ಶಾಖವನ್ನುಪಯೋಗಿಸಿ (ಸ್ವರ್ ಫ್ರೈ) ಅಥವಾ ನೀರಿನಲ್ಲಿ ಬೇಯಿಸಿದರೆ ಅನೇಕ ಪೋಷಕಾಂಶಗಳು ನಾಶವಾಗುತ್ತವೆ. ಕೇಲ್ ಸೊಪ್ಪಿನ ರಸ, ಸೇಬಿನ ಹಣ್ಣಿನೊಂದಿಗೆ ಕೇಲ್ ಸೊಪ್ಪು ಹಾಕಿ ಮಾಡಿದ ಸ್ಮೂತಿ (smoothie) ಜನಪ್ರಿಯ ಮತ್ತು ಆರೋಗ್ಯದಾಯಕ. ದಂಟಿನ ಸೊಪ್ಪು, ಗೋಣಿಸೊಪ್ಪು, ಮೆಂತ್ಯೆಸೊಪ್ಪು ಮತ್ತಿತರ ಸೊಪ್ಪುಗಳನ್ನು ಉಪಯೋಗಿಸಿದಂತೆ ಕೇಲ್ ಸೊಪ್ಪನ್ನು ಸಾಂಬಾರ್, ಪಲ್ಯ ಮತ್ತು ಸಾಗು ಮಾಡಲು ಉಪಯೋಗಿಸಬಹುದು.

ಮುಂದಿನ ಪುಟ ನೋಡಿ ...

ಕೇಲ್ ಮತ್ತು ಕಡಲೇಬೇಳೆ ಪಲ್ಯ

ಗಮನಿಸಿ: 1 ಲೋಟ = 250 ಮಿಲಿಲೀಟರ್

1/4 ಲೋಟ ಕಡಲೇಬೇಳೆ

4 ಲೋಟ ಸಣ್ಣದಾಗಿ ಹೆಚ್ಚಿದ ಕೇಲ್

2-3 ಟೀ ಚಮಚೆ ಎಣ್ಣೆ, 1 ಟೀ ಚಮಚೆ ಸಾಸಿವೆ,

8-10 ಎಲೆ ಕರಿಬೇವು

1 ಲೋಟ ಹೆಚ್ಚಿದ ನೀರುಳ್ಳಿ

2-4 ಸಣ್ಣಗೆ ಹೆಚ್ಚಿದ ಹಸಿಮೆಣಸಿನಕಾಯಿ

1-2 ಬೇಳೆ ಜಜ್ಜಿದ ಬೆಳ್ಳುಳ್ಳಿ ಅಥವಾ 2 ಚಿಟಿಕೆ ಇಂಗು

2 ಲೋಟ ಹೆಚ್ಚಿದ ಟೊಮೇಟೊ

1/2 ಟೀ ಚಮಚೆ ಉಪ್ಪು

1-2 ಟೇಬಲ್ ಚಮಚೆ ನಿಂಬೆರಸ

1-2 ಟೇಬಲ್ ಚಮಚೆ ಕಾಯಿತುರಿ

ಮಾಡುವ ವಿಧಾನ

1. ಕಡಲೇಬೇಳೆಯನ್ನು ಬೇಯಿಸಿ, ಕೇಲ್ ಸೊಪ್ಪನ್ನು ಬೆರಸಿಡಿ.
2. ಒಂದು ಪಾತ್ರೆಯಲ್ಲಿ ಎಣ್ಣೆ ಬಿಸಿ ಮಾಡಿ, ಸಾಸಿವೆ ಸಿಡಿಸಿ, ಕರಿಬೇವು ಚಟಪಟ ಅಂದಮೇಲೆ, ನೀರುಳ್ಳಿ, ಹಸಿಮೆಣಸಿನಕಾಯಿ, ಬೆಳ್ಳುಳ್ಳಿ ಅಥವಾ ಇಂಗು ಹಾಕಿ, ಕೆದಕಿ, ಸ್ವಲ್ಪ ಬೆಂದ ನಂತರ ಟೊಮೇಟೊ, ಕಡಲೆಬೇಳೆ ಮತ್ತು ಕೇಲ್ ಸೊಪ್ಪನ್ನು ಹಾಕಿ ಬೇಯಿಸಿ. ಚೆನ್ನಾಗಿ ಬೆಂದ ಮೇಲೆ ಉಪ್ಪು, ನಿಂಬೆರಸ ಮತ್ತು ಕಾಯಿತುರಿ ಬೆರಸಿ, ಕೆದಕಿ, ಒಂದೆರಡು ನಿಮಿಷಗಳ ನಂತರ ಕೆಳಗಿಳಿಸಿ.

ವಿಚಾರ

ವಿಹಾರ

ಮಾಲು, ಅಡಿಲೈಡ್

ಆರಂಭಗೂರ್ವೀ ಕ್ಷಯಿಣೀ ಕ್ರಮೇಣ
ಲಘ್ವೀ ಪುರಾ ವೃದ್ಧಿಮತೀ ಚ ಪಶ್ಚಾತ್
ದಿನಸ್ಯ ಪೂರ್ವಾರ್ಧಪರಾರ್ಧ ಭಿನ್ನ
ಛಾಯೇವ ಮೈತ್ರಿ ಖಲಸಜ್ಜನಾನಮ್

ಸಜ್ಜನರು

ಈ ಮೇಲಿನ ಶ್ಲೋಕ ಭರ್ತೃ ಹರಿಯ ಶತಕತ್ರಯದಿಂದ ಆಯ್ದದ್ದು. ಭರ್ತೃಹರಿ ಒಬ್ಬ ಮಹಾನ್ ಸಂಸ್ಕೃತ ಕವಿ. ಇವನು ಉಜ್ಜಯನಿಯ ರಾಜನಾಗಿದ್ದು, ವೈರಾಗ್ಯವನ್ನು ತಾಳಿ ತನ್ನ ತಮ್ಮನಾದ ವಿಕ್ರಮಾದಿತ್ಯನಿಗೆ ರಾಜ್ಯವನ್ನು ಒಪ್ಪಿಸಿ ತಾನು ಯೋಗಿಯಾದವನು. ತನ್ನ ಮಹಾನ್ ವಿದ್ಯಾ ಕೌಶಲ್ಯದಿಂದ ನೀತಿ ಶತಕ, ಶೃಂಗಾರ ಶತಕ ಮತ್ತು ವೈರಾಗ್ಯ ಶತಕಗಳೆಂಬ ಮುನ್ನೂರು ಪದ್ಯಗಳ ನೀತಿಸಾರಯುಕ್ತವಾದ ಗ್ರಂಥವನ್ನು ಬರೆದಿದ್ದಾನೆ.

ಈ ಪದ್ಯಗಳು ಸುಭಾಷಿತಗಳಾಗಿ ಅನೇಕರ ಬಾಯಲ್ಲಿ ಇವೆ.

ಮೇಲೆ ತಿಳಿಸಿದ ಶ್ಲೋಕದ ಅರ್ಥವಿವರ ವಿಶೇಷವಾಗಿದೆ.

ಮುಂಜಾನೆಯ ನೆರಳು ಆರಂಭದಲ್ಲಿ ದೀರ್ಘವಾಗಿದ್ದು ಮಧ್ಯಾಹ್ನದ ವೇಳೆಗೆ ನೆರಳೇ ಇಲ್ಲದಂತಾಗುತ್ತದೆ. ಹಾಗೆಯೇ ದುಷ್ಟರು ಸ್ನೇಹವನ್ನು ಬಹಳ ಗಾಢ ತೋರಿಸಿ, ವ್ಯಕ್ತಿಯನ್ನು ದುರುಪಯೋಗಪಡಿಸಿಕೊಂಡು ಕ್ರಮೇಣ ಆ ವ್ಯಕ್ತಿಯ ಸ್ನೇಹವನ್ನು ತ್ಯಜಿಸುತ್ತಾರೆ.

ಸಜ್ಜನರದರೋ ಮಧ್ಯಾಹ್ನದ ನಂತರದ ನೆರಳಿನಂತೆ. ಸ್ನೇಹವನ್ನು ಕಿಂಚಿತ್ತಾಗಿ ಪ್ರಾರಂಭಿಸಿ ಸಂಜೆಯವೇಳೆಯ ನೆರಳಿನಂತೆ ತಮ್ಮ ಸ್ನೇಹವನ್ನು ವೃದ್ಧಿಪಡಿಸುತ್ತಾರೆ.

ನಾವುಕೂಡ ಮುಂಜಾನೆಯ ನೆರಳಿನಂತಿರುವ ದುರ್ಜನರ ಸಂಗವನ್ನು ಮಾಡದೆ, ಉತ್ತಮ ಸ್ನೇಹ ಹಸ್ತ ಚಾಚುವ ಸಜ್ಜನರ ಸ್ನೇಹವನ್ನು ಬಯಸುವವರಾಗೋಣ. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಸೂಜಿಗಲ್ಲು

ಮಹಾ ಮೆರೀತಾಳೆ ಇವಳು. ಇವಳು ಇಲ್ಲದಿದ್ರೆ ಪ್ರಪಂಚಾನೇ ಇಲ್ಲ ಅನ್ನೋಹಾಗೆ ಆಡ್ತಾಳೆ. ಅದು ನಿಜಾನೂ ಹೌದು. ಬಹಳ ಸೂಕ್ಷ್ಮವಾದ ಕಣ್ಣು, ಸಪೂರವಾದ ದೇಹ ಇರೋ ಇವಳ ಹಿಂದೆ ಬೇರೆ ಬೇರೆ ವರ್ಣದವು ಆಗಾಗ್ಗೆ ಬೀಳ್ತಾನೇ ಇರತ್ವೆ. ಸ್ವಲ್ಪ ಕಾಲ ಇವಳ ಜೊತೆ ಇರತ್ವೆ. ನಂತರ ಯಾವ್ಯಾವ್ದೋ ಆಕಾರದಲ್ಲಿ ಎಲ್ಲೆಲ್ಲೋ ಸೇರತ್ವೆ. ಈ ಸುಂದರೀನ ಕಂಡರೆ ಗಂಡಸರಿಗೂ ಇಷ್ಟ, ಹೆಂಗಸರಿಗೂ ಇಷ್ಟ. ಮಕ್ಕಳ ಜೊತೆ ಇರಕ್ಕೆ ಮಾತ್ರ ಇವಳು ನಾಲಾಯಕ್ಕು. ಕೃತಯುಗದಿಂದ ಇವಳಿಗೆ ಡಿಮ್ಯಾಂಡ್ ಇದ್ದೇಯಿದೆ. ಎಲ್ಲ ಕಾಲದ ಫ್ಯಾಷನ್‌ಗೂ ಇವಳೇ ಜೀವಾಳ. ಕೆಲವೊಮ್ಮೆ ಜನರ ಮಾನ ಹೋಗೋ ಸಂದರ್ಭ ಬಂದಾಗ ಮಾನ ಕಾಪಾಡೋ ಇವಳನ್ನ ಜೋಪಾನವಾಗಿ ನೋಡ್ಕೊಳ್ದೇಯಿದ್ರೆ ಎಲ್ಲಿ ಹೋಗ್ತಾಳೆ ಅನ್ನೋದೇ ಗೊತ್ತಾಗಲ್ಲ. ಥಳಕುಬಳುಕಿನ ಈ ಸುಂದರಿ ಮೃದೂನಿ ಕುಸುಮಾದಪಿ ಅಂತ ನೋಡಕ್ಕೆ ಅನ್ಸಿದ್ರೂ ವಜ್ರಾದಪಿ ಕಠೋರವಾಗಿಯೂ ಇರುತ್ತಾಳೆ. ಒಂದೇ ಕುಟುಕಿನಲ್ಲಿ ಚುರುಗುಟ್ಟಿಸಿ ನೆತ್ತರು ಹೊಮ್ಮಿಸಬಲ್ಲ ಈಕೆಯ ಸಹವಾಸ ಕಷ್ಟವಾದರೂ ಇಷ್ಟ.

ಯಾರೀ ಲಲನಾಮಣಿ, ಯಾರೀ ಕಾಂತಾಮಣಿ? ಯಾರೀ ಸುಂದರ ಪುಷ್ಪ? ಎಂದಿರೇ? ಈಕೆಯೇ ಪುಷ್ಪಗಳನ್ನು ಪೋಣಿಸಲು, ಮಣಿಗಳನ್ನು ಸೇರಿಸಲು, ತೇಪೆಗಳನ್ನು ಹಾಕಲು ಬಳಸಲ್ಪಡುವ ಸೂಜಿ!

ನನಗೂ ಮೊದಲಿಗೆ ಸೂಜಿ ಗಂಡೋ, ಹೆಣ್ಣೋ ಎಂಬ ಅನುಮಾನವಿತ್ತು. ಆದರೆ ಅಷ್ಟುದ್ದದ ದಾರ ಇಷ್ಟೇ ಇರುವ ಸೂಜಿಯ ಹಿಂದೆಹಿಂದೆಯೇ ಬರುವುದನ್ನು ಕಂಡಾಗ ಕಾಲೇಜಿನ ಸಪೂರ ಬೆಡಗಿಯ ಹಿಂದೆ ಬರುವ ಹುಡುಗರ, ಲೆಕ್ಚರರುಗಳ ಸಾಲುಸಾಲು ನೆನಪಾಗಿ ದಾರವೇ ಗಂಡು, ಸೂಜಿಯೇ ಹೆಣ್ಣು ಎಂಬ ನಿರ್ಧಾರಕ್ಕೆ ಬಂದೆ. ಜೊತೆಗೆ ಕನ್ನಡ ವ್ಯಾಕರಣದಲ್ಲೂ ದಾರ ಎಂದರೆ ಗಂಡು ಎಂದಿದೆಯಲ್ಲ! ಜಮೀನು-ದಾರ, ಜವಾಬು-ದಾರ, ಗುತ್ತಿಗೆ-ದಾರ.....

ಸೂಜಿ ಪುರಾಣಕಾಲದಿಂದಲೂ ಅಸ್ತಿತ್ವದಲ್ಲಿದೆ ಎನ್ನುವುದಕ್ಕೆ ಅಂದೊಮ್ಮೆ ಉದರ ತುಂಬಿರ್ಪುದಕೆ ಸಾಕ್ಷಿಯೋಪಾದಿಯೊಳ್ ಕಂಠದಿನ್ ಸಶಬ್ದವಾಯುವಂ ಪೊರಡಿಸಿ, ಉದರದ ಮೇಲ್ತಬಲ ಮೇಲಾಡಿಪ ರೀತಿಯೊಳ್ ಕರಗಳನಾಡಿಸುತ್ತಾ ಸಂಪ್ರೀತರಾದ ಸೂತಪುರಾಣಿಕರು ಜನಮೇಜಯನನ್ನು ಉದ್ದೇಶಿಸಿ ಹೇಳಿದ ಈ ವೃತ್ತಾಂತವೇ ಇದೆ. ಇದೋ ಅದರ ಝೆರಾಕ್ಸ್ ಕಾಪಿ.

ಕೇಳು ಜನಮೇಜಯ, ಧರಿತ್ರೀಪಾಲ, ನಿದ್ರಾಲೋಲ, ಕಲಿಯುಗದರಸರೋಪಾದಿಯೊಳ್ ಕಾರ್ಯಮಿರ್ಪ ಸುಸಂಧಿಯೊಳ್ಗೊರಕೆಗೊರೆವ ನಿನ್ನೀ ಜಡತ್ವಮಂ ಸಮುದ್ರಮಥನಕಾಲದೊಳುದಯಿಸಿದ ಕಾರ್ಕೋಟಕ-ಪೀಯೂಷದ ಆದಿಯಕ್ಷರಗಳಿಂದುದಿಸಿದ ಕಾಫಿಯಂ ಸೇವಿಸುರ್ತಮೀ ಕಥನವನಾಲಿಸು.

ಪೂರ್ವದೊಳ್ ಧರಣಿಯೊಳಾರುಂ ಇಲ್ಲದಿರಲ್, ಸಗ್ಗಮಿನ್ನುಂ ಸುರರ್ಪುಟ್ಟಿಲ್ಲದ ಕಾರಣದಿಂ ಬಿಮ್ಮೆಂದಿರಲ್ ಮುಂದೊದಗುವ ಸುತಸುತೆಯರ್ಗೆ ಅಂಗಕುಲಾವಿಯಂ ನೇಯ್ವುದಗತ್ಯಮೆಂದರಿತಾ ಆದಿಶಕ್ತಿಯು ಪುಟ್ಟುವ ಬಾಲಕರ್ಗೆ ಪಂಚೆಯೋಪಾದಿಯೊಳ್, ಬಾಲಕಿಯರ್ಗೆ ಸೀರೆಯೋಪಾದಿಯೊಳ್ ಕುಲಾವಿಯಂ ನೇಯ್ದಳ್; ಮುಂದೊಂದು ದಿನ ಸಕಲ ವಸ್ತ್ರಗಳೂ ಹ್ರಸ್ವಗೊಂಡಾ ಕಾರಣದಿನ್ ಆ ಕುಲಾವಿ ತಲೆಗೆ ಮಾತ್ರವೆಂದಾದುದು ಪ್ರತ್ಯೇಕವೇ ಆದ ಉಪಾಖ್ಯಾನವು. ಅದಂ ನಂತರ ಪೇಳ್ವೆನ್. ಇಂತಿರ್ಪ ವಸ್ತ್ರಮಂ ಕಣ್ಗೊಂಡ ಬಾಲಕರ್ ಅದಂ ಮುದದಿಂ ಪೊಂದಿರಲ್ ಬಾಲಕಿಯರದನೊಲ್ಲೆನೆಂದರಕಟಾ. ಎಮ್ಮಂಗಗಳಿಗೊಪ್ಪ ರೀತಿಯೊಳಿರಲ್ ವಸ್ತ್ರಂ, ಇಲ್ಲದಿರ್ದೊಡೆ ಕಲಿಯುಗದೊಳ್ ಟೈಂ ಸ್ಕ್ವೇರಿನೊಳ್ ಮುಂದೊಮ್ಮೆ ಜರುಗುವೋ◌ೋಪಾದಿಯೊಳ್ ನಿರ್ವಸ್ತ್ರಮೆನಲ್ ಬೆಚ್ಚಿರ್ದ ಆದಿಶಕ್ತಿ ಅನತಿಕಾಲದೊಳ್ ಜಗದಾದಿಯಾದ ಲೇಡಿ ಟೈಲರೊಬ್ಬನಂ ಸೃಷ್ಟಿಸಿ ತಾನ್ ನೇಯ್ದ ಸೀರೆಗೆ ಮ್ಯಾಚಿಂಗ್ ಬ್ಲೌಸ್ ಮಾಡಿಸಿದಳೆಂಬುದರೊಳೇನಾಶ್ಚರ್ಯಮು! ಅದಂ ನಿರುಕಿಸಿ, ಸ್ಪರ್ಶಿಸಿ, ಸಂತಸಂಗೊಂಡ ಆದಿ ತರಳೆಯರೆಲ್ಲಾ ಮೋದದಿಂ ವಸ್ತ್ರಂಗಳಂ ಧರಿಸಿ ದೇವತೆಗಳ ಕಣ್ಮಣಿಯಾದರ್ ಗಡಾ. ಸಮುದ್ರಮಥನದೊಳ್ ಲಕ್ಷ್ಮಿ ಜಲಧಿಯಿನುದಯಿಸುವಾಗ ಮ್ಯಾಚಿಂಗ್ ಸ್ಯಾರಿ, ಮ್ಯಾಚಿಂಗ್ ಬ್ಲೌಸ್ ಇರ್ದುದೇ ಆ ದಿನಗಳೊಳ್ ಸಿಂಪಿಗನಿರ್ದನೆಂಬುದಕ್ಕೆ ಸಾಕ್ಷಿ. ಆದಿಶಕ್ತಿ ಸಿಂಪಿಗನಂ ಸೃಷ್ಟಿಸಲ್, ಸಿಂಪಿಗ ವಸ್ತ್ರವಂ ಅಲ್ಲಲ್ಲಿ ಛಿದ್ರಗೊಳಿಸಲ್, ಛಿದ್ರವಂ ಭದ್ರಗೊಳಿಸಲ್ ಆದಿಶಕ್ತಿಯೇ ಸೂಕ್ಷ್ಮಕಂಗಳ, ಸಪೂರದೇಹದ ಸೂಜಿಯಂ ಸೃಷ್ಟಿಸಿದಳ್. ಇದಂ ವೀಕ್ಷಿಸಿರ್ದ ಗುರು ಬೃಹಸ್ಪತಿ ಭೇಷ್ ಎನಲ್ ಶುಕ್ರಾಚಾರ್ಯನ್ "ರಕ್ಕಸರಿಗಿದು ತಕ್ಕುದಲ್ತು. ಸುರರುಡುಪು ಸೂಕ್ಷ್ಮವು. ರಕ್ಕಸರಿರ್ಪುದಡವಿಯೊಳ್. ರಕ್ಕಸರಿಗೊಪ್ಪುವ ದಾರಂ ಗೋಣಿದಾರಂ, ಪೊಲೆವುದಕೆ ದಬ್ಬಳವು. ಆನ್ ಅದನ್ ಸೃಷ್ಟಿಪೆನ್" ಎಂದರು. ಇಂತು ಧರಣಿಯೊಳ್ ಸೂಜಿ, ದಬ್ಬಳಗಳ ಉದಯಮಾಯಿತೆಂದು ತಿಳಿ!

ಮುಂದಿನ ಪುಟ ನೋಡಿ ...

ಪಳೆಗನ್ನಡದೊಳ್ ಪೇಳ್ದರೆ ನಿದ್ರಾವಶನಾಗುವುದರಿಂದ ಕಲಿಯುಗಕನ್ನಡದೊಳ್ ಮುಂದಿನ ಭಾಗವನ್ನು ಕೇಳು. ಕಲಿಯುಗದಲ್ಲಿ ಕಂಪ್ಯೂಟರುಗಳೆಂಬ ಅದ್ಭುತಗಳು ಸೃಷ್ಟಿಯಾಗಿ ಎಲ್ಲವೂ ಕಟ್ & ಪೇಸ್ಟ್ ಆಗುವಂತಹ ಅನುಕೂಲವು ಬೇಡರ ಕಣ್ಣಪ್ಪನ ಕಾಲದಲ್ಲಿ ಇರಲಿಲ್ಲವಾದ್ದರಿಂದ ಕಣ್ಣಪ್ಪ ತನ್ನ ಕಣ್ಣುಗಳನ್ನು ಶಿವನಿಗೆ ಜೋಡಿಸಿದಾಗ ಹೊಲಿಗೆ ಹಾಕಬೇಕಿತ್ತು. ಶಿವನೇ ಅಷ್ಟು ದೊಡ್ಡ ಆನೆಯ ತಲೆಯನ್ನು ಚಿಕ್ಕ ಬಾಲಕನ ದೇಹಕ್ಕೆ ಹೊಂದಿಸುವುದಕ್ಕೆ ಹೊಲಿಗೆ ಹಾಕದಿದ್ದರೆ ಸಾಧ್ಯವಾಗುತ್ತಿರಲಿಲ್ಲ. ತತ್ಕಾರಣ ಗಣೇಶನ ಉದಯಕಾಲದಲ್ಲೇ, ಬೇಡರ ಕಣ್ಣಪ್ಪನ ಕಾಲದಲ್ಲೇ ಸೂಜಿ ಅಸ್ತಿತ್ವದಲ್ಲಿದ್ದುದಷ್ಟೇ ಅಲ್ಲದೆ ಮಹತ್ವವನ್ನೂ ಪಡೆದಿತ್ತು. ಮುಂದಿನ ಮಹಾಭಾರತದ ಯುದ್ಧಕ್ಕೂ ಸೂಜಿಯ ಉಲ್ಲೇಖವೇ ಕಾರಣ. ''ಪಾಂಡವರಿಗೆ ಸೂಜಿ ಮೊನೆಯಷ್ಟೂ ಜಾಗವನ್ನು ಕೊಡುವುದಿಲ್ಲ'' ಎಂದು ದುರ್ಯೋಧನ ಹೇಳಿದುದೇ ಯುದ್ಧಕ್ಕೆ ಕಾರಣ. ಸೂಜಿಮೊನೆ ಇಲ್ಲದಿದ್ದರೆ ವಂಶವಂಶವೇ ಕೊನೆ ಎಂಬುದಕ್ಕೆ ಕುರುಕ್ಷೇತ್ರವೇ ಸಾಕ್ಷಿ.

ಇಷ್ಟು ಹೇಳುವಷ್ಟು ಹೊತ್ತಿಗೆ ಜನಮೇಜಯ ಮತ್ತೆ ಗೊರಕೆ ಹೊಡೆದದ್ದರಿಂದ ಸೂತಪುರಾಣಿಕರು ಸೂಜಿಕಥೆ ನಿಲ್ಲಿಸಿದರು. ಆದರೆ ಸೀರಿಯಲ್ ಕಾಲದ ನಾನು ನಿಲ್ಲಿಸಲು ಸಾಧ್ಯವೆ? ಕಾಲ ಕಳೆದಂತೆ ಸೂಜಿಯಲ್ಲಿಯೂ ಪಂಥಗಳು ಹುಟ್ಟಿಕೊಂಡವು. ವಿಷ್ಣುವು ರೇಷ್ಮೆಯ ಬಟ್ಟೆಗಳನ್ನೇ ಧರಿಸುವುದರಿಂದ ಅದಕ್ಕೆ ಸಣ್ಣ ಸೂಜಿಯೇ ಸಾಕು. ಈಶ್ವರ ತೊಡುವುದು ಲೆದರ್ ಗಾರ್ಮೆಂಟ್ಸ್ ಆದ್ದರಿಂದ ದಪ್ಪ ಸೂಜಿಯೇ ಆಗಬೇಕು. ಆದ್ದರಿಂದ ಸಣ್ಣ ಸೂಜಿ ಹರಿವಂಶ; ದಪ್ಪ ಸೂಜಿ ಹರವಂಶ ಎಂದಾಯಿತು. ಇನ್ನು ಕಣ್ಣಿನ ಆಧಾರದ ಮೇಲೂ ಸೂಜಿಗಳನ್ನು ಕೊಳ್ಳಲಾಗುತ್ತದೆ. ಚೀನಾ, ಜಪಾನಿನವರಷ್ಟೇ ಸಣ್ಣದಾದ ಕಣ್ಣುಗಳನ್ನು ಹೊಂದಿರುವ ಸೂಜಿ ಸೂಕ್ಷ್ಮ ಕೆಲಸಗಳಿಗೆ ಸಲ್ಲುವುದು. ಕಮಲನಯನೆಯಂತೆ ಅಗಲವಾದ ಕಣ್ಣುಗಳಿದ್ದರೆ ಗೋಣಿ, ಪಾರ್ಸಲ್‌ಗಳು, ಇತ್ಯಾದಿಗಳನ್ನು ಹೊಲೆಯುವ ದಾರ ಪೋಣಿಸಲು ಅನುಕೂಲ.

ಸೂಜಿ ಹೆಣ್ಣು ಎಂದೆನಲ್ಲವೆ; ಅದಕ್ಕೆ ಮತ್ತಷ್ಟು ಪುಷ್ಟೀಕರಣವಿದೆ. ದಾರ ಗಂಡು. ಅದನ್ನು ಎಲ್ಲಿ ಬಿಸಾಡಿದ್ದರೂ ಮತ್ತೆ ಕೈಗೆ ಸಿಗುತ್ತದೆ. ಸೂಜಿ ಒಮ್ಮೆ ಕಳೆದುಕೊಂಡರೆ ದೊರಕುವುದು ಬಹಳ ಕಷ್ಟ. ದಾರವನ್ನು ಹುಲ್ಲಿನ ಮೆದೆಯಲ್ಲಿ ಇಟ್ಟರೂ ಹುಡುಕಬಹುದು. ಆದರೆ ಹುಲ್ಲಿನ ಮೆದೆಯಲ್ಲಿ ಸೂಜಿ ಹುಡುಕಿದಂತೆ ಎಂಬ ಗಾದೆಯೇ ಇದೆ. ಆದ್ದರಿಂದ ಸೂಜಿ ಡಾರ್ಲಿಂಗ್ ತಪ್ಪಿಸಿಕೊಂಡುಹೋಗದಂತೆ ಕಾಯ್ದುಕೊಳ್ಳುವುದು ಅಗತ್ಯ. ಆದ್ದರಿಂದಲೇ ಸೂಜಿಯನ್ನು ಪ್ರತಿದಿನ ಕಾಣುವ ಕ್ಯಾಲೆಂಡರ್‌ಗೆ ಸಿಕ್ಕಿಸಿರುತ್ತಾರೆ. ಸೂಜಿ ಪ್ರಪಂಚದ ಮೊಟ್ಟಮೊದಲ ಕ್ಯಾಲೆಂಡರ್ ಗರ್ಲ್! ಹೆಣ್ಣು ತಾಯಿಯಾಗಿ, ಮಗಳಾಗಿ, ಗೆಳತಿಯಾಗಿ, ಪತ್ನಿಯಾಗಿ ಬರುವಂತೆಯೂ ಸೂಜಿಯೂ ಸಹ ವಿವಿಧ ರೀತಿಯಲ್ಲಿ ಜನೋಪಯೋಗಿ ಆಗುತ್ತಾಳೆ. ಬರೀ ದಾರಗಳಿಂದ ಕೂಡಿದ ಬಟ್ಟೆಯನ್ನು ಒಂದು ಆಕಾರಕ್ಕೆ ತರಲು ಬೇಕಾದ ಹೊಲಿಗೆಗೆ ಸೂಜಿಯೇ ಆಧಾರ. ಸೂಜಿಯಿಲ್ಲದಿದ್ದರೆ ಶರ್ಟ್, ಪ್ಯಾಂಟ್, ಬ್ಲೌಸ್, ಚೂಡಿದಾರ್, ಮಿನಿ, ಮಿಡಿ, ಇತ್ಯಾದಿಗಳ ಅವತಾರವೇ ಇಲ್ಲದೆ ಎಲ್ಲಿ ನೋಡಿದರು ಪಂಚೆ ಸೀರೆಗಳೆ ಬೇರೆ ವಸ್ತ್ರವಿಲ್ಲ ಎಂಬ ಪರಿಸ್ಥಿತಿ ಉಂಟಾಗುತ್ತಿತ್ತು. ಆದ್ದರಿಂದ ಫ್ಯಾಷನ್ ಜಗಕ್ಕೆ ಸೂಜಿಯೇ ಜನನಿ. ಕೈಯಲ್ಲಿ ಸಿಬರು, ಉಬುಮುಳ್ಳು, ಕಾರೇಮುಳ್ಳು ಸಿಕ್ಕಿಕೊಂಡಾಗ ಅದನ್ನು ಹೆಕ್ಕಿ ಎತ್ತಲು ಸಹಾಯ ಮಾಡುವ ಗೆಳತಿಯಂತೆ, ಆಭರಣಗಳ ಸಂದುಗಳಲ್ಲಿ ಸೇರಿದ ಕಸವನ್ನು ತೆಗೆಯಲು ತಾಯಿಗೆ ಸಹಾಯಕವಾಗುವ ಮಗಳಂತೆ, ದಾರದೊಡನೆ ''ನೀನೆಲ್ಲೋ ನಾನಲ್ಲೆ, ಈ ಜೀವ ನಿನ್ನಲ್ಲೆ'' ಎನ್ನುತ್ತಾ ಸದಾ ಜೊತೆಗಿರುವ ಹೆಂಡತಿಯಂತೆ, ಎಲ್ಲ ವಿಧದಲ್ಲೂ ಸೂಜಿ ಹೆಣ್ಣೆಂಬುದನ್ನು ನಿರೂಪಿಸುತ್ತಾಳೆ. ಕೆಟ್ಟು ಹರಿದು ಹಂಚಿಹೋದ ಸಂಸಾರಕ್ಕೆ ತೇಪೆ ಮಾನ ಕಾಪಾಡುವ ಹೆಣ್ಣಿನಂತೆಯೇ ಹರಿದ ಬಟ್ಟೆಗೆ ತೇಪೆ ಹಾಕಿ ಮಾನ ಕಾಪಾಡಲು ಸೂಜಿ ಅತ್ಯಗತ್ಯ. ಹೆಣ್ಣಿನಂತೆಯೇ ಒಂದೇ ಡಬ್ಬಿಯಲ್ಲಿ ಒಟ್ಟುಕುಟುಂಬದಲ್ಲಿ ವಾಸಿಸುವ ಸೂಜಿ, ಈಗಿನ ಹೆಣ್ಣುಗಳಂತೆ ಒಂಟಿಯಾಗಿ ದಾರದ ಉಂಡೆಗೇ ಅಂಟಿಕೊಂಡು ನ್ಯೂಕ್ಲಿಯರ್ ಫ್ಯಾಮಿಲಿಯ ಹರಿಕಾರಳೂ ಆಗಿರುತ್ತಾಳೆ.
ಸೂಜಿಗೆ ಫಾರಿನ್‌ನಲ್ಲಿ ಒಬ್ಬ ಕಸಿನ್ ಇದ್ದಾಳೆ. ಅವಳೇ ಗುಂಡುಸೂಜಿ. ಸೂಜಿಗೆ ಕಣ್ಣಿದೆ, ತಲೆಯಿಲ್ಲ. ಗುಂಡುಸೂಜಿಗೆ ತಲೆಯಿದೆ, ಕಣ್ಣಿಲ್ಲ. ಕಣ್ಣಿದ್ದವರಿಗೆ ದೃಷ್ಟಿ ಇರುವುದರಿಂದ ವಿಶಾಲ ದೃಷ್ಟಿ ಹೊಂದುವುದು ಸಾಧ್ಯ. ಹೀಗಾಗಿ ಸೂಜಿ ಭಾರತೀಯ ನಾರಿಯಂತೆ ಒಂದೇ ದಾರಕ್ಕೆ, ಅಂದರೆ ಒಂದೇ ಕುಟುಂಬಕ್ಕೆ/ಸಂಪ್ರದಾಯಕ್ಕೆ/ಪಂಥಕ್ಕೆ ಬದ್ಧವಾಗಿದ್ದು ಆ ಕುಟುಂಬ/ಸಂಪ್ರದಾಯ/ಪಂಥವನ್ನು ಭದ್ರಗೊಳಿಸಲು ಸಹಾಯಕವಾಗುತ್ತಾಳೆ. ತಲೆ ಇರುವವರಿಗೆ ಲಾಭದ ಚಿಂತೆ ಹೆಚ್ಚು. ಲಾಭಕ್ಕಾಗಿ ಚಂಚಲತೆ ಅಗತ್ಯ. ಆದ್ದರಿಂದ ಗುಂಡುಸೂಜಿ ಒಂದಕ್ಕೆ ಅಂಟಿಕೊಂಡಿರದೆ ಫೈಲಿನಿಂದ ಫೈಲಿಗೆ ಬದಲಾಗುತ್ತಿರುತ್ತದೆ. ಒಂದು ವಿಧದಲ್ಲಿ ಸೂಜಿ ಗುಡ್ ಓಲ್ಡ್ ಗರತಿ; ಗುಂಡುಸೂಜಿ ಅನುಕೂಲಕ್ಕೆ ಒಗ್ಗುವ ಲಿವ್ ಇನ್ ಪಾರ್ಟ್‌ನರ್! ಲಿವ್ ಇನ್ ಪಾರ್ಟ್‌ನರ್ ಎಂದಿಗೂ ಎದೆಗೆ ಅತಿ ಹತ್ತಿರ. ಸಮಾರಂಭಗಳಲ್ಲಿ ಪದಕಗಳನ್ನು, ಗುರುತಿನ ಬಿಲ್ಲೆಗಳನ್ನು ಎದೆಯ ಹತ್ತಿರಕ್ಕೆ ಸಿಕ್ಕಿಸಲು ಗುಂಡುಸೂಜಿಯನ್ನೇ ಬಳಸುವುದೇ ಇದಕ್ಕೆ ಸಾಕ್ಷಿ.

ಬರಹ ಯಾರದಾದರೇನು, ಹಿಂಜಿ ಹಿಂಜಿ ಬರೆದರೆ ಓದಲಾಗದು. ಚೆನ್ನದ ಸೂಜಿ ಎಂದು ಕಣ್ಣು ಚುಚ್ಚಿಕೊಳ್ಳಲಾದೀತೇ? ಇದೋ ಬಟ್ಟೆ ಹೊಲೆದ ತಕ್ಷಣ ಅಲ್ಲಿಂದ ಕಟ್ ಆದ ದಾರದೊಡನೆ ನಿರ್ಗಮಿಸುವ ಸೂಜಿಯಂತೆ ನಾನು ನಿರ್ಗಮಿಸುತ್ತಿದ್ದೇನೆ. ಓದುವ ಮಹಾಶಯಾ, ಸೂಜಿಪುರಾಣ ನಿನಗೆ ಒಪ್ಪಿದ್ದರೆ ನೀನೇ ನನಗೆ ಸೂಜಿಗಲ್ಲು; ಒಪ್ಪಲಿಲ್ಲವೇ? ಇದೇ ನನಗೆ ಗಲ್ಲು! ▪

ಆಸ್ಟ್ರೇಲಿಯಾದ ರಾಷ್ಟ್ರೀಯ ಪುಷ್ಪ – ವ್ಯಾಟಲ್ ಬ್ಲಾಸಮ್

ಅರಳಿರುವ ವ್ಯಾಟಲ್ ಬ್ಲಾಸಮ್ ಹೂವುಗಳು

- ಗುಂಪು ಗುಂಪಾಗಿ ಬಿಡುವ ಈ ಹಳದೀ ಬಣ್ಣದ ಹೂವು ನೋಡಲು ಬಲು ಸೊಗಸು.
- ಅಕೇಶಿಯ ಕುಲದ ಸಸ್ಯವಾದ ಇದರಲ್ಲಿ ಅನೇಕ ಪ್ರಭೇದಗಳಿವೆ
- ಆಸ್ಟ್ರೇಲಿಯನ್ ಪ್ರಭೇದಗಳನ್ನು ಸಾಮಾನ್ಯವಾಗಿ ವ್ಯಾಟಲ್ ಗಳೆಂದು ಕರೆಯಲಾಗುತ್ತದೆ
- "ಅಕೇಶಿಯ ಪಿಕ್ನಂಥಾ" ಎನ್ನುವ ಸಸ್ಯ ಶಾಸ್ತ್ರೀಯ ಹೆಸರುಳ್ಳ ಗಿಡವು ಆಸ್ಟ್ರೇಲಿಯಾ ದೇಶದ ರಾಷ್ಟ್ರಪುಷ್ಪವಾಗಿ ಸೆಪ್ಟೆಂಬರ್ ೧, ೧೯೮೮ ರಂದು ಅಧಿಕೃತವಾಗಿ ಘೋಷಣೆ ಮಾಡಲಾಗಿದೆ. ಹೀಗಾಗಿ ಸೆಪ್ಟೆಂಬರ್ ೧ ದಿನಾಂಕವನ್ನು ನ್ಯಾಷನಲ್ ವ್ಯಾಟಲ್ ಡೇ ಎನ್ನುವರು
- ಭಾರತದ ದೇಶದಲ್ಲಿ ಸಿಗುವ ಜಾಲಿ ಮರವೂ ಅಕೇಶಿಯಾ ಜಾತಿಗೆ ಸೇರಿದ್ದು
- ಪ್ರಾಚೀನ ಇಜಿಪ್ಷಿಯನ್ನರು ಅಕೇಶಿಯವನ್ನು ಬಣ್ಣದ ತಯಾರಿಕೆಯಲ್ಲಿ ಬಳಕೆ ಮಾಡುತ್ತಿದ್ದರು
- ವ್ಯಾಟಲ್‌ಗಳೆಂದು ಕರೆಯಲ್ಪಡುವ ಹಲವು ಆಸ್ಟ್ರೇಲಿಯನ್ ಪ್ರಭೇದ ತೊಗಟೆಗಳು ಟ್ಯಾನಿಕ್ ಆಮ್ಲದಿಂದ ಸಮೃದ್ಧವಾಗಿದೆ ಜೊತೆಗೆ ರಫ್ತಿನ ಒಂದು ಪ್ರಮುಖ ಪದಾರ್ಥವಾಗಿದೆ; ಪ್ರಮುಖ ಪ್ರಭೇದಗಳಲ್ಲಿ ಅಕೇಶಿಯ ಪಿಕ್ನಂಥಾ (ಗೋಲ್ಡನ್ ವ್ಯಾಟಲ್), ಅಕೇಶಿಯ ಡೆಕರೆನ್ಸ್ (ಟ್ಯಾನ್ ವ್ಯಾಟಲ್), ಅಕೇಶಿಯ ಡೆಲ್ಬಾಟ (ಸಿಲ್ವರ್ ವ್ಯಾಟಲ್) ಹಾಗು ಅಕೇಶಿಯ ಮೆಯನ್ಸ್ಸೀ (ಬ್ಲ್ಯಾಕ್ ವ್ಯಾಟಲ್)ಗಳು ಸೇರಿವೆ. ▪

ಆಸ್ಟ್ರೇಲಿಯಾದ ಲಾಂಛನದಲ್ಲಿ ವ್ಯಾಟಲ್ ಬ್ಲಾಸಮ್

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಕಥಾ ಚೆಲುಮೆ

ಓಟ

ಕನಕಾಪುರ ನಾರಾಯಣ



ಆಫ್ರಿಕಾ ದೇಶದಲ್ಲಿ ಆಗ ಬಿಳಿಯರು ಆಳುತ್ತಿದ್ದ ಕಾಲ. ಇಬ್ಬರು ಕರಿಯರು "ಬಿಳಿಯರಿಗೆ ಮಾತ್ರ" ಎನ್ನುವ ಸ್ಥಳದಲ್ಲಿ ಭೇಟಿಯಾದರು. ಒಬ್ಬನಿಗೆ ಅಲ್ಲಿ ಕೆಲಸ ಮಾಡಲು ಅನುಮತಿ ಇತ್ತು, ಮತ್ತೊಬ್ಬನಿಗೆ ಅದಿರಲಿಲ್ಲ. ಸಿಕ್ಕಿಬಿದ್ದರೆ ಜೈಲು! ಅದೇ ವೇಳೆಗೆ ಒಬ್ಬ ಪೋಲೀಸ್ ಅವರ ಬಳಿಗೇ ಬರುವುದನ್ನು ಕಂಡು ಕೆಲಸ ಮಾಡಲು ಅನುಮತಿ ಇದ್ದ ಕರಿಯ ಮತ್ತೊಬ್ಬನಿಗೆ ನೀನು ಓಡು ನಾನು ಹಿಂದೆಯೇ ಬರುವೆ ಎಂದ.

ಇಬ್ಬರೂ ಓಡತೊಡಗಿದರು. ಪೋಲೀಸ್ ಇನ್ನೂ ಯುವಕ ಹಾಗೂ ಗಟ್ಟಿ ಆಳಾದ್ದರಿಂದ ಹಿಂದೆ ಓಡುತ್ತಿದ್ದವನನ್ನು ಹಿಡಿದ. "ತೋರಿಸು ನಿನ್ನ ಪೆರ್ಮಿಟ್ " ಅಂದ. ಜೇಬುಗಳೆಲ್ಲಾ ತಡಕಾಡಿ ತಡಮಾಡಿ ಪರ್ಮಿಟ್ ತೋರಿಸಿದ ಆ ಕರಿಯ. ಅಷ್ಟರಲ್ಲಿ ಪರ್ಮಿಟ್ ಇಲ್ಲದವ ಕೈಗೆ ಸಿಗದಷ್ಟು ದೂರ ಓಡಿದ್ದ. "ಪರ್ಮಿಟ್ ಇದ್ದರೂ ನೀನು ಏಕೆ ಓಡಿದೆ" ಎಂದು ಪೋಲೀಸ್ ಪ್ರಶ್ನಿಸಿದ. "ಡಾಕ್ಟರ್ ನನಗೆ ದಿನಾ ನಾಲ್ಕು ಮೈಲಿ ಓಡಲು ಹೇಳಿದ್ದಾರೆ" ಅಂದ. "ಹಾಗಾದರೆ ನಿನ್ನ ಗೆಳೆಯ ಏಕೆ ಓಡುತ್ತಿದ್ದ?"ಪೋಲೀಸ್ ಮತ್ತೆ ಪ್ರಶ್ನಿಸಿದ. "ಆತನಿಗೂ ಡಾಕ್ಟರ್ ಓಡಲು ಸಲಹೆ ನೀಡಿದ್ದಾರೆ"ಎಂದ. ಅದಕ್ಕೆ ಪೋಲೀಸ್ "ನನ್ನನ್ನು ಅಷ್ಟು ಪೆದ್ದನೆಂದು ತಿಳಿದಿರುವೆಯಾ, ನೀವು ಆರೋಗ್ಯಕ್ಕಾಗಿ ಓಡುತ್ತಿದ್ದರೆ ನಾನು ಹಿಂಬಾಲಿಸಿದರೂ ನಿಲ್ಲದೆ ಏಕೆ ಓಡಿದಿರಿ?"ಎಂದ ಅದಕ್ಕೆ ಆ ಜಾಣ ಕರಿಯ"ಅರೆ ನಿಮಗೂ ಡಾಕ್ಟರ್ ಓಡಲು ಹೇಳಿರಬಹುದೇನೋ ಅಂತ ತಿಳಿದು ಹಾಗೆ ಮಾಡಿದ್ದಿ" ಎಂದು ತಪ್ಪಿಸಿಕೊಂಡು ಹೊರಟೇಬಿಟ್ಟ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಬೇಸನ್ ಲಾಡು

ಬೇಕಾಗುವ ಸಾಮಗ್ರಿಗಳು

- ಅರ್ಧಕಿಲೋ ಕಡಲೇ ಹಿಟ್ಟು
- ಒಂದು ಬಟ್ಟಲು ತುಪ್ಪ, ಎರಡು ಬಟ್ಟಲು ಸಕ್ಕರೆ
- ಹುರಿಗಡಲೆ ಕಾಲು ಲೋಟ, ಹಾಲಿನಪುಡಿ ನಾಲ್ಕು ಚಮಚ
- ಗೋಡಂಬಿ ದ್ರಾಕ್ಷಿ ನಾಲ್ಕು ಚಮಚ, ಸ್ವಲ್ಪ ಹಾಲು

ಮಾಡುವ ವಿಧಾನ

- ಹುರಿಗಡಲೆ, ಸಕ್ಕರೆ, ಹಾಲಿನಪುಡಿ ನುಣ್ಣಗೆ ಪುಡಿ ಮಾಡಿಟ್ಟುಕೊಳ್ಳಿ
- ಅಗಲವಾದ ಬಾಣಲೆಯಲ್ಲಿ ತುಪ್ಪಕಾಯಿಸಿ ಅದಕ್ಕೆ ಕಡಲೇ ಹಿಟ್ಟನ್ನು ಘಮವಾಗಿ ಹುರಿದುಕೊಳ್ಳಿ
- ಅದಕ್ಕೆ ಪುಡಿ ಮಾಡಿದ ಮಿಶ್ರಣವನ್ನೂ,ಗೋಡಂಬಿ ದ್ರಾಕ್ಷಿ ಯನ್ನೂ ಸೇರಿಸಿ ಇನ್ನೈದು ನಿಮಿಷ ಹುರಿಯಿರಿ
- ಒಲೆ ಆರಿದ ನಂತರ ಸ್ವಲ್ಪ ಸ್ವಲ್ಪ ಹಾಲು ಸೇರಿಸಿಕೊಂಡು ಉಂಡೆ ಕಟ್ಟಿರಿ

ರೆಸಿಪಿ ಕೊಡ್ತೀರಾ!

ಒಂದರೊಳ್ ಒಂದು ಒಗಟು

೧.ಸಂಹರಿಸು ಎಂಬರ್ಥದ ಮೂರಕ್ಷರದ ಪದವಿದು
೨.ಮೊದಲೆರೆಡಕ್ಷರವು ಶಿವನನ್ನು ಸೂಚಿಸುವುದು
೩.ಕೊನೆಯೆರಡು ಕೂಡಿದರೆ ಯುದ್ಧದ ಸಮಾನಾರ್ಥಕವಾಗುವುದು
೪ ಮೊದಲಿಗೆ ಕೊನೆಯಕ್ಷರ ಸೇರಿಸಿದರೆ ಯಾರೂ ಬೇಡವೆನ್ನುವುದಿಲ್ಲ

ಉತ್ತರಕ್ಕೆ ಪುಟ ೧೧ ನೋಡಿ

ನಮ್ಮ ದೇಶ ಭಾರತ ...

ಗಡಿಗಳಲ್ಲಿ ಇರುವ ಯೋಧರು
ಗುಡಿ ಗುಡಿಗಳ ದೇವರು
ಪ್ರಾಣವನ್ನು ಪಣಕೆ ಇಟ್ಟು
ದೇಶ ಕಾಯ್ವ ಧೀರರು

ಚಳಿಯೆ ಇರಲಿ ಬಿಸಿಲೆ ಇರಲಿ
ಹೊರಗಿಡುವರು ತಲೆಯನು
ಸಿಡಿ ಗುಂಡಿನ ಮಳೆಗೆರೆಯಲು
ಕೊಡುವರು ಗಂಡೆದೆಯನು

ಬಲಿಯಾಗರೆ ಆ ಅರಿಗಳು
ಹಿಡಿದ ಇವರ ಕೋವಿಗೆ
ಸುಡಲಿ ಆ ನರಿಗಳಿವರ
ಕೆಂಗಣ್ಣಿನ ಕಾವಿಗೆ

ಇವರ ಅಂಬೆ ಭಾರತಾಂಬೆ
ಕಾಯಲಿವರ ಪ್ರಾಣವ
ನಮ್ಮೆದೆಯಲಿ ಹರಿಸಿಬಿಡಲಿ
ದೇಶ ಭಕುತಿ ಸಾರವ

ಕಲಿತ ದೇಶ ಬಲಿತ ದೇಶ
ನಮ್ಮ ದೇಶ ಭಾರತ
ಸಾರಲಿ ಈ ಸಂದೇಶವ
ತ್ರಿವರ್ಣ ಧ್ವಜವು ಹಾರುತ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ತನ್ನ ಆನೆಗೆ ಒದಗಿದ್ದ ಕಣ್ಣಿನ ಬೇನೆಯನ್ನು ಗುಣಪಡಿಸಲು ಟಿಪ್ಪೂ ಸುಲ್ತಾನ ಮೊರೆ ಹೊಕ್ಕ ದೇವರು ಯಾರು? ಆ ತೊಂದರೆ ನಿವಾರಣೆಯಾದ ನಂತರ ಆ ದೇವರನ್ನು ಏನೆಂದು ಕರೆದ?

೨. ಭಾರತದ ಅತ್ಯಂತ ಹಳೆಯ ರೈಲು ಸೇತುವೆ ಎಲ್ಲಿದೆ? ಇದನ್ನು ಯಾವ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ?

ಸರಿ ಉತ್ತರಕ್ಕೆ ಪುಟ ೧೯ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ಹರಣ ೨. ಹರ ೩.ರಣ ೪. ಹಣ

ಹಾಸ್ಯ ಚಿಲುಮೆ

ಮಕ್ಕಳೇ ನೀವು ಆರೋಗ್ಯವಾಗಿರಬೇಕೂಂದ್ರೆ ಕಡಿಮೆ ಅಂದ್ರೂ ಎಂಟು ಗಂಟೆ ಮಲಗಬೇಕು.

ತಿಮ್ಮ ಕೇಳಿದ "ಅದ್ ಹೇಗೆ ಸಾಧ್ಯ ಸಾರ್? ಶಾಲೆ ೭ಕ್ಕೇ ಶುರು ಆಗತ್ತೆ?"

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಸುಖದ ಜೊತೆಗಾರ ಸಕಾರದೊಂದಿಗೆ

	■	

೨. ನಿರ್ದಿಷ್ಟ ಉತ್ತರ ಕೊಡುವುದನ್ನು ಉಪಾಯದಿಂದ ತಪ್ಪಿಸಿಕೊಳ್ಳಲು ದೀಪವನ್ನು ಯಾವುದರ ಮೇಲಿಡಬೇಕು?

		■	

೩. ಪಂಡಿತರೊಡನೆ ಒಮ್ಮೊಮ್ಮೆ ಬರುವವರು ವೃಕ್ಷದಲ್ಲೇ ಇರಬೇಕು ನೋಡಿ.

■	■	

೪. ಭಂಟನು ತನ್ನ ದೇವನೊಡನೆ ಆನಂದದಿಂದ ಒಂದಾಗಿರುವ. ಬೆಂಗಳೂರಿನ ಜನಪ್ರಿಯ ತಾಣ.

				■	■		

೫. ಈ ಪವಿತ್ರ ಗ್ರಂಥದ ಉದಯಕ್ಕೆ ಯುದ್ಧಭೂಮಿಯೇ ಬೇಕಾಯಿತೇನು?

		■	■		

೬. ತನಗಗತ್ಯವಿರುವುದನ್ನು ತಾನೇ ಪೂರೈಸಿಕೊಳ್ಳುವವ.

■			

ಉತ್ತರ: ದನ ಕಾಯುವವನೇ ಒಡೆಯನಾಗಿ ಮಂಜಿನ ಮುಸುಕಿನಲ್ಲಿ ನಿಂತಿದ್ದಾನೆ.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಸೆಪ್ಟೆಂಬರ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಆಗಸ್ಟ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್
- ಹರಿಣಿ ರಾವ್, ನವದೆಹಲಿ

ಆಗಸ್ಟ್ ತಿಂಗಳ ಪದಪುಂಜದ ಉತ್ತರ

೧. ಗೆಲುವು ಸಾಧಿಸಬೇಕೆಂದರೆ ಮರಳಿ ಮರಳಿ ಮಾಡಬೇಕಾದ್ದು?

ಯ	ತ್ನ

೨. ಮಳೆಗಿಂತ ಹೆಚ್ಚಾಗಿ ಗುಡುಗು ಸಿಡಿಲಿನದೇ ಹೆಚ್ಚಾದ ?

ಅ	ರ್ಭ	ಟ

೩. ಸುತ್ತುತ್ತಾ ಸುತ್ತುತ್ತಾ ಸುಯ್ಯೆಂದು ಬಂದು. ಸಿಕ್ಕಿದ್ದನ್ನೆಲ್ಲಾ ಮೇಲಕ್ಕೆ ಹಾರಿಸಿಕೊಂಡು ಹೋದ ವಾಯು.

ಸುಂ	ಟ	ರ	ಗಾ	ಳಿ

೪. ನಾಮಾಮೃತ ತುಂಬ ಬೇಕಾದ ಮಾತು.

ವ	ಚ	ನ

೫.ಬೆಟ್ಟಗುಡ್ಡಗಳು. ಅರ್ಕಾವತಿ ನದಿ. ಜೊತೆಗೆ ಮಾವಿನ ಹಣ್ಣು ಎಂದಾಗ. ನೆನಪಿಗೆ ಬರುವ ಜಿಲ್ಲೆ?

ರಾ	ಮ	ನ	ಗ	ರ

೬. ಭೂತಾಯಿಯ ಮೇಲೆ ಕುಳಿತು ನಡೆಸುವ ಮುಷ್ಕರ.

ಧ	ರ	ಣಿ

ಉತ್ತರ: ಒಡಲಾಳದಲ್ಲಿ ಅಮೂಲ್ಯವಾದ ಸಂಪತ್ತನ್ನಿರಿಸಿಕೊಂಡ ಭೂಮಾತೆಯೇನು ಈಕೆ?

ರ	ತ್ನ	ಗ	ರ್ಭ	ವ	ಸುಂ	ಧ	ರ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852



ಅನಂತನ ಗಂಟು - ೧೫ - ೧೫ - ರಚನೆ - ಶಾಂತಲಾ ಸುರೇಶ, ತುಮಕೂರು

ಲೇಖಕರು: ನಾಗಶೈಲ ಕುಮಾರ್

ಕೊನೆಯ ಕಂತು

ಕರ್ನಾಟಕದಲ್ಲಿ ಮುಸ್ಲಿಮರ ಆಡಳಿತ.



ಸುಮಾರು ೭ನೆಯ ಶತಮಾನದಿಂದಲೇ ಕರ್ನಾಟಕದಲ್ಲಿ ಮುಸ್ಲಿಮರ ಅಗಮನವಾಗತೊಡಗಿತ್ತು. ವ್ಯಾಪಾರಕ್ಕೆಂದು ಇರಾನ್, ಇರಾಕ್, ಟರ್ಕಿ, ಅಫಘಾನಿಸ್ತಾನ ಗಳಿಂದ ಬಂದವರು ಮಂಗಳೂರು, ಭಟ್ಕಳ ಮುಂತಾದ ಕಡಲತೀರದ ಪ್ರದೇಶಗಳಲ್ಲಿ ನೆಲೆಯಾಗತೊಡಗಿದ್ದರು. ನಂತರದ ದಿನಗಳಲ್ಲಿ ಒಳನಾಡುಗಳಲ್ಲೂ ಅವರು ಹರಡಿ ವ್ಯಾಪಾರಗಳಲ್ಲಿ ತೊಡಗಿಕೊಂಡಿದ್ದರು. ಅನೇಕ ರಾಜರುಗಳ ಅಡಿಯಲ್ಲಿ ಹಲವಾರು ಮುಸ್ಲಿಮ್ ಅಧಿಕಾರಿಗಳ ನೇಮಕವೂ ನಡೆದಿತ್ತು. ಸೈನ್ಯಗಳಲ್ಲೂ ಅವರ ನೇಮಕಾತಿಯಾಗುತ್ತಿತ್ತು.

೧೧ನೆಯ ಶತಮಾನದಿಂದಾಚೆಗೆ, ಅಂದರೆ, ಅಲ್ಲಾವುದ್ದೀನ್ ಖಿಲ್ಜಿ ಯ ದಂಡಯಾತ್ರೆ, ಮತ್ತು ಮಲ್ಲಿಕಾಫರನ ಲಗ್ಗೆಯ ನಂತರ ದಕ್ಷಿಣ ಭಾರತಲ್ಲಿ ಮುಸ್ಲಿಮರ ಅಡಳಿತ ಆರಂಭವಾಗತೊಡಗಿತ್ತು.

ಕರ್ನಾಟಕದವು ತನ್ನದೇ ಆದ ಮೊದಲ ಮುಸ್ಲಿಮ್ ಆಡಳಿತವನ್ನು ಹೊಂದಿದ್ದೆಂದರೆ, ಬಹಮನಿ ಸುಲ್ತಾನರಿಂದ. ಮಹಮ್ಮದ್ ಬಿನ್ ತುಘಲಕ್ ಬಳಿ ಮೇಲು ದರ್ಜೆಯ ಅಧಿಕಾರಿಯಾಗಿದ್ದವನೊಬ್ಬನಿಂದ ಬಹಮನಿ ಸಾಮ್ರಾಜ್ಯದ ಸ್ಥಾಪನೆಯಾಯಿತು. ತುಘಲಕ್ ನ ವಿಪರೀತದ ಆಡಳಿತದ ವೈಖರಿಯಿಂದ ರೋಸಿದ ಈತ, ತನ್ನ ಒಡೆಯನೂ, ಹಿತೈಷಿಯೂ ಆಗಿದ್ದ ಗಂಗೂ ಎಂಬ ಬ್ರಾಹ್ಮಣನ ನೆರೆವಿನಿಂದ ರಾಜ್ಯವನ್ನು ಸ್ಥಾಪಿಸಿ, ಗಂಗುವಿನ ನೆನೆಪಿಗಾಗಿ ತನ್ನ ವಂಶಕ್ಕೆ ಬಹಮನ್ ಶಾಹಿ (ಬ್ರಾಹ್ಮನೀ) ಎಂದು ಕರೆದನೆಂದು ಒಂದು ಐತಿಹ್ಯ. ಈತನ ಹೆಸರು ಅಲ್ಲಾ-ಉದ್-ದೀನ್ ಹಸನ್ ಗಂಗೂ ಬಹಮನ್ ಷಾ. ೧೩೪೭ರಲ್ಲಿ ಗುಲ್ಬರ್ಗದಲ್ಲಿ ಈತನ ರಾಜ್ಯಭಾರ ಆರಂಭವಾಗಿ, ಗುಲ್ಬರ್ಗ, ಬೀದರ್, ವಿದರ್ಭ ಮತ್ತು ದೌಲತಾಬಾದ್ ಗಳು ಪ್ರಮುಖ ಪ್ರದೇಶಗಳಾಗಿದ್ದವು. ಈತನು ೧೩೫೮ ರವರೆವಿಗೂ ಆಳಿದ. ೧೩೯೭ ರಲ್ಲಿ ಪಟ್ಟಕ್ಕೆ ಬಂದ ಫಿರೋಜ್ ಅದಿಲ್ ಶಾಹಿ ವಂಶದ ಶ್ರೇಷ್ಠ ಅರಸ.

ಮುಂದೆ ಇವರ ರಾಜಧಾನಿಯು ಬೀದರ್ ಗೆ ವರ್ಗವಾಯಿತು. ಇದೊಂದು ಜಗತ್ಪ್ರಸಿದ್ಧಿ ಪಡೆದ ವಿದ್ಯಾ ಸಂಸ್ಥೆಗಳಿಗೆ, ಕುಶಲಕಲೆಗಳಿಗೆ, ಸುಂದರ ವಿನ್ಯಾಸದ ಕಟ್ಟಡಗಳಿಗೆ, ಕಾರಂಜಿಗಳಿಗೆ, ಉದ್ಯಾನವನಗಳಿಗೆ ಹೆಸರುವಾಸಿಯಾಯಿತು. ವಿದೇಶಗಳಿಂದ ಮುಸಲ್ಮಾನ ವಿದ್ವಾಂಸರು, ತಂತ್ರಜ್ಞರು, ಕುಶಲಕಸುಬುದಾರರು ಆಶ್ರಯವನ್ನರಸಿ ಇಲ್ಲಿಗೆ ಬಂದರು.

ಹೊರಗಿನಿಂದ ಬಂದವರಲ್ಲಿ ಮಹಮೂದ ಗವಾನ್, ಇಲ್ಲಿ ಅಳಿದ ಅರಸರುಗಳಿಗಿಂತಲೂ ಹೆಚ್ಚಿನ ಕೀರ್ತಿಯನ್ನು ಪಡೆದಿದ್ದಾನೆ. ಬಹಮನಿ ರಾಜರ ಪ್ರಧಾನಿಯಾಗಿ ಅದರ ಕೀರ್ತಿಯನ್ನು ಉತ್ತುಂಗಕ್ಕೇರಿಸಿದ. ಹಣಕಾಸು, ಸೈನ್ಯ, ವಿದ್ಯಾಭ್ಯಾಸ, ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಸುಧಾರಣೆ ತಂದು ಪ್ರಭಾವಶಾಲಿಯಾದ ವ್ಯಕ್ತಿಯಾಗಿದ್ದ. ಇಂದಿಗೂ ಬೀದರ್ ನಲ್ಲಿ ಮಹಮೂದ್ ಗವಾನನ ಮದರಸಾ ಅವನ ವಿದ್ಯಾ ಪ್ರೇಮಕ್ಕೆ ಸಾಕ್ಷಿಯಾಗಿ ನಿಂತಿದೆ.

ಮುಂದಿನ ದಿನಗಳಲ್ಲಿ ಬಹಮನಿ ಸಾಮ್ರಾಜ್ಯವು ಒಡೆದು ವಿಭಿನ್ನ ಸ್ವತಂತ್ರ ರಾಜ್ಯಗಳಾದವು. ಅವುಗಳೆಂದರೆ, ಬೀದರಿನ ಬರೀದ್ ಷಾಹಿ, ಬಿಜಾಪುರದ ಅದಿಲ್ ಶಾಹಿ, ಗೋಲ್ಕೊಂಡದ ಕುತುಬ್ ಷಾಹಿ ಮತ್ತು ಅಹಮದ್ ನಗರದ ನಿಜಾಮ್ ಷಾಹಿ. ಮತ್ತು ಬಿರಾರಿನ ಇಮದ್ ಷಾಹಿ. ಇವರಲ್ಲಿ ಬಿಜಾಪುರದ ಅದಿಲ್ ಷಾಹಿ ಮನೆತನ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದೆ. ಇವರುಗಳು ವಿಜಯನಗರ ಸಾಮ್ರಾಜ್ಯದ ಸಮಕಾಲೀನರಾಗಿದ್ದು ಬಹಳಷ್ಟು ಸಮಯವನ್ನು, ವಿಜಯನಗರದ ಮೇಲಿನ ಯುದ್ಧಗಳಲ್ಲಿಯೇ ಕಳೆದರು.

ಹೈದರ್ ಮತ್ತು ಟಿಪ್ಪು ಸುಲ್ತಾನ್

ಮೈಸೂರು ಪ್ರಾಂತ್ಯದಲ್ಲಿ ಇಮ್ಮಡಿಕೃಷ್ಣರಾಜ ಒಡೆಯರ ಆಳ್ವಿಕೆಯ ಸಮಯದಲ್ಲಿ ಒಬ್ಬ ಸಾಧಾರಣ ಸೈನಿಕನಾಗಿ ಸೇರಿದ ಹೈದರಾಲಿ ೧೭೪೯ ರಲ್ಲಿ ದೇವನ ಹಳ್ಳಿಯ ಮೇಲಿನ ಯುದ್ಧದಲ್ಲಿ ಅಸಾಧಾರಣ ಶೌರ್ಯ ತೋರಿ ಹೆಸರು ಮಾಡಿದ. ನಂತರದ ದಿನಗಳಲ್ಲಿ, ತನ್ನ ಧೈರ್ಯ, ಮುಂದಾಳತ್ವ, ಶಕ್ತಿಗಳ ಮೂಲಕ ಉತ್ತಮ ಸ್ಥಾನಕ್ಕೇರಿ, ಕಡೆಗೊಂದು ದಿನ ಮೈಸೂರಿನ ಮಹಾರಾಜರನ್ನು ಬದಿಗೊತ್ತಿ ತಾನೇ ಅಧಿಕಾರ ವಹಿಸಿಕೊಂಡ. ತನ್ನ ಸೈನ್ಯಕ್ಕೆ ಫ್ರೆಂಚರಿಂದ ತರಬೇತಿ ಕೊಡಿಸಿ ಸಿರಾ, ಬಿದನೂರು, ಚಿತ್ರದುರ್ಗ, ಹೀಗೆ ಹೋದಲ್ಲೆಲ್ಲಾ ವಿಜಯಗಳಿಸಿದ. ಗೆಲುವು ಸಾಧಿಸುವುದಷ್ಟೇ ಆಲ್ಲದೆ, ಎಲ್ಲಾ ಕಡೆಗಳಲ್ಲೂ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಾ, ತನ್ನ ರಾಜ್ಯ ವಿಸ್ತರಣೆಗೆ ಬೇಕಾದ ಮದ್ದುಗುಂಡುಗಳು, ಶಸ್ತ್ರಾಸ್ತ್ರಗಳನ್ನು ತಯಾರಿಸುವಲ್ಲಿ ಗಮನ ಹರಿಸಿದ. ಅಪಾರ ಸೈನ್ಯವನ್ನು ಕಟ್ಟಿದ. ಹೈದರಾಲಿಯು ನಿಜಾಮರು, ಮರಾಠರೊಡನೆ ಒಪ್ಪಂದ ಮಾಡಿಕೊಂಡು ಬ್ರಿಟೀಷರನ್ನು ಸೋಲಿಸಿದ. ಆದರೆ ನಂತರದಲ್ಲಿ ಅವರೀರ್ವರೂ ಹೈದರಾಲಿಯ ಕೈಬಿಟ್ಟಾಗ, ಅವನು ಏಕಾಂಗಿಯಾಗಿ ಬ್ರಿಟೀಷರನ್ನು ಎದುರಿಸಬೇಕಾಯಿತು. ೧೭೮೨ರ ಎರಡನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಹೈದರಾಲಿ ತೀರಿಕೊಂಡ.

ಮುಂದಿನ ಪುಟ ನೋಡಿ ...

ಅನಕ್ಷರಸ್ಥನಾದರೂ ಹೈದರಾಲಿ, ತನ್ನ ಅಸಾಧಾರಣ ಧೈರ್ಯ, ರಾಜನೀತಿ, ದೂರದೃಷ್ಟಿಗಳಿಂದ ಕರ್ನಾಟಕದ ವಿಸ್ತಾರವನ್ನು ಇಮ್ಮಡಿಗೊಳಿಸಿ, ಆರ್ಥಿಕ ಸ್ಥಿತಿಯಿಂದ ಉನ್ನತ ಮಟ್ಟಕ್ಕೆ ತಂದ.

ತಂದೆಯೊಡನೆ ಬ್ರಿಟೀಷರ ವಿರುದ್ದದ ಯುದ್ದಗಳಲ್ಲಿ ಪಾಲ್ಗೊಂಡು ಅನುಭವವನ್ನು ಪಡೆದಿದ್ದ ಟಿಪ್ಪು, ತಂದೆಯ ಹಾದಿಯಲ್ಲಿಯೇ ನಡೆದು ಬ್ರಿಟೀಷರನ್ನು ಹೊರಗಟ್ಟುವುದೇ ಮುಖ್ಯ ಗುರಿಯನ್ನಾಗಿಸಿ ಸತತ ಹೋರಾಟನಡೆಸಿದ. ಇದಕ್ಕಾಗಿ ಫ್ರೆಂಚರಷ್ಟೇ ಅಲ್ಲದೆ ಅಫಘಾನಿಸ್ತಾನ್ ಮತ್ತು ತುರ್ಕಿಯ ಸುಲ್ತಾನರುಗಳ ಸಹಾಯ ಕೋರಿದ್ದ. ಬ್ರಿಟೀಷರು ಮಾತ್ರವಲ್ಲದೆ ಮರಾಠರು ನಿಜಾಮರ ವಿರುದ್ದವೂ ಹೋರಾಡಬೇಕಾಗಿತ್ತು. ಹೀಗಾಗಿ ಅನೇಕ ಸೋಲುಗಳನ್ನು ಕಂಡು ಬ್ರಿಟೀಷರೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಈ ಒಪ್ಪಂದದ ಪ್ರಕಾರ ಟಿಪ್ಪು ತನ್ನ ಇಬ್ಬರು ಪುತ್ರರನ್ನು ಬ್ರಿಟೀಷರ ಬಳಿ ಒತ್ತೆಯಿಡಬೇಕಾಯಿತು. ಕಡೆಗೆ ೧೭೯೯ರಲ್ಲಿ ಶ್ರೀರಂಗಪಟ್ಟಣದಲ್ಲಿ ನಡೆದ ನಾಲ್ಕನೆಯ ಮೈಸೂರು ಯುದ್ದದಲ್ಲಿ ಟಿಪ್ಪುವು ಮೃತನಾದ.

ಬಹಮನಿ ಸುಲ್ತಾನರಿಂದ ಹಿಡಿದು ಟಿಪ್ಪೂ ಸುಲ್ತಾನನವರೆವಿಗೂ ಸುಮಾರು 350 ವರ್ಷಗಳ ಕಾಲದ ಮುಸ್ಲಿಮರ ಆಡಳಿತ, ಕನ್ನಡ ನಾಡಿನ ಹಲವಾರು ಪ್ರಾಕಾರಗಳಲ್ಲಿ ಗಣನೀಯ ಪ್ರಭಾವಬೀರಿದೆ. ಪ್ರಮುಖವಾಗಿ ಸಾಮಾಜಿಕ ಕ್ಷೇತ್ರದಲ್ಲಿ ಸಂಪೂರ್ಣ ಹೊಸತಾದ ಸಂಸ್ಕೃತಿಯ ಪರಿಚಯವಾಯಿತು.ಇದರಿಂದಾಗಿ ಇಲ್ಲಿನ ಜನತೆಯ ಆಚಾರ ವಿಚಾರಗಳಲ್ಲೂ ಸಾಕಷ್ಟು ಬದಲಾವಣೆಗಳಾದವು. ಇನ್ನು ಭಾಷೆಯ ವಿಷಯದಲ್ಲಿ ಹೇಳುವುದಾದರೆ ಉರ್ದು ಕರ್ನಾಟಕದ ಒಂದು ಪ್ರಮುಖ ಬಾಷೆಯಾಗಿ ನೆಲೆಯೂರಿತು. ಅಷ್ಟೇ ಅಲ್ಲದೆ ಕನ್ನಡವು ಉರ್ದು ಬಾಷೆಯ ಅನೇಕ ಪದಗಳನ್ನು ಸೇರಿಸಿಕೊಂಡು ಬೆಳೆಯಿತು. ಆಡಳಿತ ಬಾಷೆಯಲ್ಲಂತೂ ಉರ್ದು ಕನ್ನಡದೊಡನೆ ಹಾಸು ಹೊಕ್ಕಾಯಿತು. ಕಲೆ ಹಾಗೂ ವಾಸ್ತುಶಿಲ್ಪದಲ್ಲಿ ಮುಸ್ಲಿಮರ ಆಡಳಿತ ಕರ್ನಾಟಕಕ್ಕೆ ಗಣನೀಯ ಕೊಡುಗೆ ನೀಡಿದೆ. ಬೀದರದಲ್ಲಿ ಮೊಹಮುದ್ ಗವಾನನ ಮದರಸಾ, ಬಿಜಾಪುರದಲ್ಲಿ ಗೋಲ್ ಗುಂಬಜ್, ಇಬ್ರಾಹಿಂ ರೋಜಾ, ಗುಲ್ಬರ್ಗದ ಬಂದೆ ನವಾಜ್ ಮಸೀದಿ, ಹೀಗೆ ಇನ್ನೂ ಅನೇಕ ಸ್ಮಾರಕಗಳು ರಾಜ್ಯಾದ್ಯಂತ ಹರಡಿವೆ. ನಂತರದ ದಿನಗಳಲ್ಲಿ ವಿಜಯನಗರದಾದಿಯಾಗಿ, ಹಿಂದೂ ರಾಜರುಗಳಿಂದ ನಿರ್ಮಾಣವಾದ ಅನೇಕ ಸುಂದರ ಕಟ್ಟಡಗಳ ವಿನ್ಯಾಸದಲ್ಲಿ ಮುಸ್ಲಿಮ್ ಶೈಲಿಯು ಮಿಳಿತವಾಗಿದೆ. ಕರ್ನಾಟಕವು ಕಾಫಿ ಬೆಳೆಯಲ್ಲಿ ವಿಶ್ವ ವಿಖ್ಯಾತವಾಗಲು ಮುಸ್ಲಿಮ್ ಸೂಫಿಗಳು ತಮ್ಮೊಡನೆ ತಂದ ಕಾಫಿ ಬೀಜಗಳೆ ಕಾರಣವಾಗಿದೆ.

ಭಾರತದ ಇತರಭಾಗಗಳಲ್ಲಿ ನಡೆದ ಮುಸ್ಲಿಮರ ಆಡಳಿತದಡಿಯಲ್ಲಿನ ರಾಜ್ಯಗಳಿಗೆ ಹೋಲಿಸಿದರೆ ಹೈದರ್ ಮತ್ತು ಟಿಪ್ಪು ಆಡಳಿತದಡಿಯಲ್ಲಿ ಮೈಸೂರು ರಾಜ್ಯ ಬಹಳ ಪ್ರಗತಿ ಹೊಂದಿತ್ತು. ಅಧುನಿಕ ತಂತ್ರಜ್ಞಾನಕ್ಕೆ ಪ್ರಾಶಸ್ತ್ಯ ನೀಡಿದ ಟಿಪ್ಪೂ, ಕೇವಲ ಯುದ್ದದ ಶಸ್ತಾಸ್ತ್ರಗಳು ಮಾತವಲ್ಲದೆ, ಸಕ್ಕರೆ, ರೇಷ್ಮೆ, ಕಾಗದ ಮುಂತಾದ ಕಾರ್ಖಾನೆಗಳನ್ನು ಸ್ಥಾಪಿಸಿದ. ರಾಜ್ಯದ ವ್ಯವಸಾಯೋತ್ಪನ್ನಗಳು, ಮತ್ತು ಕೈಗಾರಿಕಾ ಉತ್ಪನ್ನಗಳು ವಿದೇಶಗಳಲ್ಲಿ ಮಾರಾಟವಾಗಿ, ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುವಂತೆ ನೋಡಿಕೊಂಡ. ಕರ್ನಾಟಕಕ್ಕೆ ಹೈದರನ ಅಚ್ಚಳಿಯದ ಕೊಡುಗೆಯೆಂದರೆ ಬೆಂಗಳೂರಿನ ಲಾಲ್ ಭಾಗ್.

ಪ್ರಮುಖವಾದ ರಾಜವಂಶಗಳಲ್ಲದೆ ಹಲವಾರು ಪ್ರಾಂತೀಯ ಸಾಮಂತರಾಜರು, ಪಾಳೆಯಗಾರರು, ನಾಯಕರುಗಳು ಕರ್ನಾಟಕದಲ್ಲಿ ತಮ್ಮ ಛಾಪನ್ನು ಉಳಿಸಿ ಹೋಗಿದ್ದಾರೆ. ಅವರಲ್ಲಿ ಚಿತ್ರದುರ್ಗ, ಕೆಳದಿ, ಮತ್ತು ಯಲಹಂಕದ ನಾಯಕರುಗಳು ಪ್ರಮುಖರಾಗಿದ್ದಾರೆ. ಈ ಮೂರೂ ರಾಜ್ಯಗಳು ಹೊಯ್ಸಳರು ನಂತರ ವಿಜಯನಗರದವರಿಗೆ ಸಾಮಂತರಾಗಿದ್ದು, ವಿಜಯನಗರದ ಪತನದ ನಂತರ ಸ್ವತಂತ್ರವಾಗಿ ಆಳಿದ್ದರು.


ಚಿತ್ರದುರ್ಗದ ಕೋಟೆ

ಚಿತ್ರದುರ್ಗದ ನಾಯಕರು: ಕಾಮಗೇತಿ ನಾಯಕರೆಂದು ಹೇಳಿಕೊಳ್ಳುವ ಚಿತ್ರದುರ್ಗದ ನಾಯಕರು ದಾವಣಗೆರೆ ಮೂಲದವರಾಗಿದ್ದು. ಮತ್ತಿಯ ತಿಮ್ಮಣ್ಣನಾಯಕನೆಂಬುವನು ಚಿತ್ರದುರ್ಗ ವಂಶದ ಸ್ಥಾಪಕನಾಗಿದ್ದು. ವಿಜಯನಗರದ ಸಾಳ್ವ ನರಸಿಂಹನ ಕಾಲದಲ್ಲಿ ಸೇನಾನಿಯಾಗಿದ್ದ, ಈತ ಮುಂದೆ ಹಿರಿಯೂರು ಚಿತ್ರದುರ್ಗಗಳ ಆಡಳಿತಾಧಿಕಾರಿಯಾಗಿ ನೇಮಕಗೊಂಡ. ನಂತರದಲ್ಲಿ ಚಿತ್ರದುರ್ಗದ ಕೋಟೆಯನ್ನು ಕಟ್ಟಿಸಿ, ಇವನ ಮಗ ಓಬಣ್ಣನಾಯಕನ ಕಾಲದಲ್ಲಿ ಚಿತ್ರದುರ್ಗ ಪಟ್ಟಣ ವಿಸ್ತಾರಗೊಂಡಿತು. ೧೬೮೯ ರಿಂದ ೧೭೨೧ ರವರೆಗೆ ಆಡಳಿತ ನಡೆಸಿದ ಬಿಳಿಚೋಡು ಬರಮಣ್ಣ ನಾಯಕ ಈ ವಂಶದ ಬಲು ಗಣ್ಯನಾದ ಅರಸ. ನಂತರ ೧೭೫೪ ರಿಂದ ೧೭೭೯ ರವರೆಗೆ ಆಳಿದ ಐದನೆಯ ಮದಕರಿನಾಯಕ ಕೂಡ ಒಬ್ಬ ಸಮರ್ಥ ಅರಸು. ಈ ವಂಶದ ದೊರೆಗಳಿಗೆ ಮದಕರಿ ನಾಯಕ ಎಂಬುವ ಬಿರುದನ್ನು ಧರಿಸುವ ಬಳಕೆಯಿತ್ತು. ಕನ್ನಡ ನಾಡಿನ ಖ್ಯಾತ ಧೀರ ವನಿತೆ ಒನಕೆ ಓಬವ್ವ ಐದನೇ ಮದಕರಿನಾಯಕನ ಕಾಲದಲ್ಲಿದ್ದು, ಚಿತ್ರದುರ್ಗದ ಹೆಮ್ಮೆಯಾಗಿದ್ದಾಳೆ. ಹೈದರಾಲಿಯು ಕುತಂತ್ರದಿಂದ ಮದಕರಿನಾಯಕನನ್ನು ಕೊಂದ ಮೇಲೆ, ಚಿತ್ರದುರ್ಗದ ಅವಸಾನವಾಯಿತು.

ಮುಂದಿನ ಪುಟ ನೋಡಿ ...

ಚಿತ್ರದುರ್ಗದ ಕೋಟೆಯು, ಭಾರತದ ಬಲಿಷ್ಠ ಕೋಟೆಗಳಲ್ಲಿ ಒಂದಾಗಿದ್ದು, ಏಳು ಸುತ್ತನ್ನು ಹೊಂದಿದ್ದು ಇಂದಿಗೂ ಅಚ್ಚರಿ ಮೂಡುವಷ್ಟು ಭದ್ರವಾಗಿದೆ. ಇದರೊಳಗೆ ಅನೇಕ ದೇವಾಲಯಗಳು, ಅರಮನೆಯ ಅವಶೇಷಗಳು ಗತವೈಭವವನ್ನು ಸಾರುತ್ತಿವೆ. ಇವರ ಆಳ್ವಿಕೆಯಲ್ಲಿ ಕಬ್ಬಿಣ ಹಾಗೂ ತಾಮ್ರದ ಗಣಿಗಳು, ಗಾಜಿನ ಉತ್ಪಾದನೆ, ಸೀರೆಗಳ ನೇಕಾರಿಕೆ ನಡೆಯುತ್ತಿತ್ತು.

ಯಲಹಂಕ ನಾಡ ಪ್ರಭುಗಳು: ರಾಜ್ಯದ ದಕ್ಷಿಣ ಭಾಗದಲ್ಲಿ ಆವತಿ,ಯಲಹಂಕ ಮತ್ತು ಬೆಂಗಳೂರುಗಳಿಂದ ಮೊದಲಿಗೆ ಹೊಯ್ಸಳರ ಆನಂತರದಲಿ ವಿಜಯನಗರದವರ ಸಾಮಂತರಾಗಿ ಕೆಂಪೇಗೌಡ ಕುಲದವರು ಆಡಳಿತ ನಡೆಸಿದ್ದರು. ೧೨ನೇ ಶತಮಾನದ ಹೊಯ್ಸಳ ದೊರೆ ವೀರಬಲ್ಲಾಳನ ಸಮಯದಲ್ಲಿ ದೇವರಸಗೌಡನೆಂಬುವನಿಂದ, ಈ ವಂಶದ ಆಳ್ವಿಕೆ ಪ್ರಾರಂಭವಾಗುತ್ತದೆ. ಮಾಗಡಿ, ದೊಡ್ಡಬಳ್ಳಾಪುರ, ಯಲಹಂಕ ಬೆಂಗಳೂರು ಇವರ ಆಳ್ವಿಕೆಯಲ್ಲಿದ್ದ ಪ್ರದೇಶಗಳಾಗಿದ್ದವು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಇವರು ರಾಜ್ಯದ ದಕ್ಷಿಣ ಭಾಗದ ಭದ್ರ ಕೋಟೆಯಂತೆ ಇದ್ದರು. ಅಷ್ಟೇ ಅಲ್ಲದೆ ಇವರು ಈ ಪ್ರದೇಶದ ಗುಡಿಗೋಪುರಗಳನ್ನು, ಕೆರೆಕಟ್ಟೆಗಳನ್ನು ಕಟ್ಟಿಸುವುದಷ್ಟೇ ಅಲ್ಲದೆ ಮತ್ತು ಇತರ ಜನೋಪಯೋಗಿ ಕಾರ್ಯಗಳಿಂದ ವಿಜಯನಗರದ ಅರಸರಿಗೂ ಮತ್ತು ಪ್ರಜೆಗಳಿಗೂ ಬಲು ಬೇಕಾದವರಾಗಿದ್ದರು.

ಇವರಲ್ಲಿ ಪ್ರಮುಖನಾದ ೧ನೇ ಕೆಂಪೇಗೌಡನು ಸುಮಾರು ೧೫೧೦ ರಲ್ಲಿ ಜನಿಸಿದನು. ಬಾಲ್ಯದಲ್ಲಿಯೇ ಒಬ್ಬ ಉತ್ತಮ ದೊರೆಯಾಗುವ ಲಕ್ಷಣಗಳನ್ನು ಹೊಂದಿದ್ದ ಕೆಂಪೇಗೌಡ, ಅದಕ್ಕೆ ತಕ್ಕುದಾದ ಉತ್ತಮ ಶಿಕ್ಷಣವನ್ನೂ ಗುರುಕುಲದಲ್ಲಿ ಪಡೆದ. ಮುಂದೆ ನವರಾತ್ರಿಯ ಸಮಯದಲ್ಲಿ ಹಂಪೆಯನ್ನು ನೋಡಿ ಬಂದ ಕೆಂಪೇಗೌಡನಿಗೆ, ತಾನೂ ಕೃಷ್ಣದೇವರಾಯನಂತ ರಾಜನಾಗಬೇಕು, ವಿಜಯನಗರದಂತೆ ನಗರ ಕಟ್ಟಬೇಕೆಂಬ ಹಂಬಲ ಮೂಡಿತ್ತು. ೧೫೩೧ ರಲ್ಲಿ ಕೆಂಪೇಗೌಡನಿಗೆ ಪಟ್ಟವಾಯಿತು. ಆ ವೇಳೆಗೆ ಶ್ರೀ ಕೃಷ್ಣದೇವರಾಯ ತೀರಿಕೊಂಡು, ರಾಜ್ಯದ ಅನೇಕ ಸಾಮಂತರು ಸ್ವತಂತ್ರರೆಂದು ಘೋಷಿಸಿಕೊಂಡಿದ್ದರೂ, ಕೆಂಪೇಗೌಡನು ಹಾಗೆ ಮಾಡದೆ ಸ್ವಾಮಿ ನಿಷ್ಠೆಯಿಂದ ಸಾಮಂತನಾಗಿಯೇ ಉಳಿದ. ೧೯೩೨ ರಲ್ಲಿ ವಿಜಯನಗರದ ಅರಸರ ಅನುಮತಿಯೊಡನೆ ಬೆಂಗಳೂರಿನ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ. ಅಂದಿನ ದಿನಗಳಲ್ಲಿಯೇ ತನ್ನ ರಾಜಧಾನಿ ಹೇಗಿರಬೇಕೆಂದು ತಜ್ಞರೊಡನೆ ಆಲೋಚಿಸಿ, ಎಲ್ಲಾ ಸೌಕರ್ಯಗಳೂ ಇದ್ದು, ತೊಂದರೆಗಳಿಗೆ ಒಳಗಾಗದಂತ, ಸುತ್ತಮುತ್ತಲಿಗಿಂತ ಎತ್ತರದ ಪ್ರದೇಶವನ್ನು ಬೆಂಗಳೂರಿಗಾಗಿ ಆಯ್ಕೆ ಮಾಡಿದ ಕೆಂಪೇಗೌಡ. ನಾಲ್ಕೂ ಕಡೆ ಗೋಪುರಗಳು, ದೇಗುಲಗಳು, ಕೆರೆಗಳು, ಈಗಲೂ ನಾವು ಕಾಣುವ ವೃತ್ತಿಯಾಧಾರಿತ ಪೇಟೆಗಳು, ಪ್ರಮುಖ ಬೀದಿಗಳು, ಎಲ್ಲವನ್ನೂ ಅಂದೇ ನಿರ್ಮಿಸಿದ್ದ ಕೆಂಪೇಗೌಡ. ಮೂರು ದಶಕಗಳಿಗೂ ಮೀರಿದ ಆಳ್ವಿಕೆಯ ನಂತರ ೧೫೬೯ ರಲ್ಲಿ ಕೆಂಪೇಗೌಡ ನಿಧನನಾದ.

ಮುಂದೆ ಬಂದ ಇಮ್ಮಡಿ ಕೆಂಪೇಗೌಡ ಅವರುಗಳೂ ಕೂಡ ಉತ್ತಮ ಆಡಲಿತ ನೀಡಿ ಬೆಂಗಳೂರನ್ನು ಅಭಿವೃದ್ಧಿ ಪಡಿಸಿದರು. ಆದರೆ ಬಿಜಾಪುರದ ದಿಲಾವರ್ ಖಾನನ ಹಾವಳಿಯಿಂದ ಅವರು ಬೆಂಗಳೂರನ್ನು ತೊರೆದು ಮಾಗಡಿಗೆ ಸ್ಥಳಾಂತರಗೊಳ್ಳಬೇಕಾಯಿತು. ಮುಂದೆ ಮೈಸೂರಿನ ದಳವಾಯಿ ಮಾಗಡಿಗೆ ಮುತ್ತಿಗೆ ಹಾಕಿ, ಅರಸನನ್ನು ಬಂಧಿಸಿದಾಗ ಅವರ ಆಡಳಿತ ಕೊನೆಗೊಂಡಿತು.

ಮೈಸೂರಿನ ರಾಜವಂಶ

ಮೈಸೂರು ದಸರಾ

ಕರ್ನಾಟಕದ ಕಡೆಯ ರಾಜವಂಶವೆಂದರೆ ಮೈಸೂರಿನ ಒಡೆಯರ ಕುಟುಂಬ. ಭಾರತಕ್ಕೆ ಸ್ವಾತಂತ್ರ್ಯ ಬಂದು ಎಲ್ಲೆಡೆ ರಾಜರಾಳ್ವಿಕೆ ಕೊನೆಗಾಣುವವರೆವಿಗೂ ಇದ್ದು ರಾಜ್ಯಭಾರ ನಡೆಸಿದ ಪ್ರಮುಖ ರಾಜವಂಶವಿದು.

14 ನೇ ಶತಮಾನದಲ್ಲಿ ಸಣ್ಣ ಪ್ರಾಂತೀಯ ಆಡಳಿತಗಾರರಿಂದ ನೋಡಿಕೊಳ್ಳಲ್ಪಡುತ್ತಿತ್ತು ಈ ಪ್ರದೇಶ. ಪುಂಡ ಸೇನಾಧಿಪತಿಯ ಕ್ರೂರ ಕೈಗೆ ಸಿಕ್ಕಿ ಅಲ್ಲಿನ ರಾಣಿ ಕಷ್ಟದಲ್ಲಿರುವಾಗ, ಉತ್ತರ ಭಾರತದಿಂದ ಬಂದ ಯದುವಂಶದವರೆಂದು ಹೇಳಲಾದ ವಿಜಯ ಮತ್ತು ಕೃಷ್ಣ ಎಂಬ ಸಹೋದರರಿಂದ ಅವಳಿಗೆ ಸಹಾಯ ದೊರೆತು, ಮುಂದೆ ಅವರೇ ನಾಡಿನ ನಾಯಕರೂ ಆದರು. ಅವರಿಂದ ಸ್ಥಾಪಿತವಾದ ವಂಶ ಮುಂದೆ ವಡೆಯರ್(ಒಡೆಯರ್) ನಾಮದಿಂದ ಸುಮಾರು 550 ವರ್ಷಗಳ ಕಾಲ ಮೈಸೂರನ್ನಾಳಿತು. ಆರಂಭದಲ್ಲಿ ವಿಜಯನಗರದರಸರಡಿ ಸಾಮಂತರಾಗಿದ್ದರು. ೧೫೬೫ರಲ್ಲಿ ವಿಜಯನಗರ ಪತನದ ಸದುಪಯೋಗ ಪಡೆದುಕೊಂಡ ರಾಜ ಒಡೆಯರ್ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಪ್ರತಿನಿಧಿಯನ್ನು ಸೋಲಿಸಿ, ಶ್ರೀರಂಗಪಟ್ಟಣವನ್ನೇ ರಾಜಧಾನಿಯನ್ನಾಗಿಸಿಕೊಂಡು ಆಳಲಾರಂಭಿಸಿದರು.

ಅಲ್ಲಿಂದಾಚೆಗೆ ಮೈಸೂರು ರಾಜ್ಯ ವಿಸ್ತಾರಗೊಳ್ಳುತ್ತಾ ಮುಂದುವರೆಯಿತು. ರಣಧೀರ ಕಂಠೀರವ ನರಸರಾಜ ಒಡೆಯರ್, ಚಿಕ್ಕ ದೇವರಾಜ ಒಡೆಯರ್ ಇವರುಗಳ ಕಾಲದಲ್ಲಿ ಮೈಸೂರು ಒಂದು ಪ್ರಮುಖ ಸಂಸ್ಥಾನವಾಗಿ ಬೆಳೆಯಿತು. ಕೆಳದಿ, ಮಧುರೈ, ತಿರುಚಿನಾಪಳ್ಳಿಯ ಪ್ರದೇಶಗಳನ್ನು ತನ್ನೊಳಗೆ ಸೇರಿಸಿಕೊಂಡಿತು. ಮುಂದೆ ಹೈದರ್ ಮತ್ತು ಟಿಪ್ಪು ಕಾಲದಲ್ಲಿ ನೆಪಮಾತ್ರಕ್ಕೆ ರಾಜರೆನಿಸಿಕೊಂಡಿದ್ದರು ಮೈಸೂರಿನ ಅರಸರು.

ಮುಂದಿನ ಪುಟ ನೋಡಿ ...

ನಂತರ ೧೮೧೦ ಅಧಿಕಾರ ವಹಿಸಿಕೊಂಡ ಮುಮ್ಮಡಿ ಕೃಷ್ಣರಾಜ ಒಡೆಯರು ಅತಿ ದೀರ್ಘಕಾಲ ಆಳಿದ ಒಡೆಯರೆನಿಸಿಕೊಂಡರೆ, ಮುಂದೆ ಬಂದ ನಾಲ್ವಡಿ ಕೃಷ್ಣರಾಜ ಒಡೆಯರು ಮಾದರಿ ಮೈಸೂರಿನ ಪಿತಾಮಹರೆನಿಸಿಕೊಂಡರು.ಈ ಸಮಯಗಳಲ್ಲಿಯೇ ಸರ್.ಎಂ. ವಿಶ್ವೇಶ್ವರಯ್ಯನವರು, ಸರ್. ಮಿರ್ಜಾ ಇಸ್ಮಾಯಿಲ್ ಅವರುಗಳು ದಿವಾನರಾಗಿದ್ದು, ಮೈಸೂರು ರಾಜ್ಯ ಭಾರತದಲ್ಲೇ ಮಾದರಿ ರಾಜ್ಯವೆನಿಸಿಕೊಂಡಿತು. ನೀರಾವರಿ, ವಿದ್ಯುತ್ತು, ಕಾರ್ಖಾನೆಗಳು, ಗಣಿಗಾರಿಕೆ, ರಸ್ತೆ ಮತ್ತು ರೈಲು ಮಾರ್ಗಗಳು ಹೀಗೆ ಎಲ್ಲಾ ರಂಗದಲ್ಲೂ ಮೈಸೂರು ಸಾಮ್ರಾಜ್ಯ ಬೇರೆಲ್ಲಾ ರಾಜ್ಯಗಳಿಗಿಂತ ಮೇಲುಗೈ ಸಾಧಿಸಿತ್ತು. 1940ರಿಂದ 1947 ರವರೆಗೆ ಆಡಳಿತ ನಡೆಸಿದ ಶ್ರೀಜಯಚಾಮರಾಜೇಂದ್ರ ಒಡೆಯರೇ ಮೈಸೂರಿನ ಕಡೆಯ ಮಹಾರಾಜರಾದರು.

19 ಮತ್ತು 20 ನೇ ಶತಮಾನಗಳು ಮೈಸೂರು ಸಂಸ್ಥಾನದ ಸುವರ್ಣ ಯುಗವೆಂದು ಹೇಳಬಹುದು. ವಿಜಯನಗರದ ಶ್ರೀಮಂತ ಪರಂಪರೆ ಮೈಸೂರಿನಲ್ಲಿ ಮುಂದುವರೆಯಿತು. ಅಲ್ಲಿನ ಆಶ್ರಯ ತಪ್ಪಿದ ಕಲೆಗಳಿಗೆ ಮೈಸೂರು ನೆಲೆಯಾಯಿತು. ಸ್ವತಃ ಆಳುವ ರಾಜರುಗಳೇ ಕಲಾದೇವಿಯ ಪುತ್ರರಂತಿದ್ದು, ಸಂಗೀತ, ಸಾಹಿತ್ಯ, ವೀಣೆ, ಪಿಟೀಲು ಮುಂತಾದ ಸಂಗೀತ ವಾದ್ಯಗಳು, ಚಿತ್ರಕಲೆ, ಶಿಲ್ಪಕಲೆ, ನೃತ್ಯ, ನಾಟಕ ಹೀಗೆ ಎಲ್ಲ ರೀತಿಯ ಕಲೆಗಳಿಗೂ ಪೋಷಣೆ ದೊರೆಯಿತು. ಮೈಸೂರು ಸದಾಶಿವಯ್ಯ, ವೀಣೆ ವೆಂಕಟಸುಬ್ಬಯ್ಯ, ವೀಣೆ ಶೇಷಣ್ಣ, ವಾಸುದೇವಾಚಾರ್ಯ, ಮುತ್ತಯ್ಯ ಭಾಗವತರು, ಪಿಟೀಲು ಚೌಡಯ್ಯ, ಕೆ.ವೆಂಕಟಪ್ಪ, ಜಟ್ಟಿ ತಾಯಮ್ಮ, ಮೂಗೂರು ಸುಬ್ಬಯ್ಯ, ಹೀಗೆ ಹೆಸರಾಂತ ಕಲಾವಿದರ ಬೀಡಾಯಿತು ಮೈಸೂರು. ಎಲ್ಲಕ್ಕಿಂತ ಹೆಚ್ಚಾಗಿ ಹಂಪೆಯಲ್ಲಿ ಆರಂಭವಾದ ನವರಾತ್ರಿಯ ದಸರಾ ಮಹೋತ್ಸವವು ಮೈಸೂರಿನಲ್ಲಿ ಇನ್ನೂ ಹೆಚ್ಚಿನ ವೈಭವವನ್ನು ಕಂಡು ದೇಶ ವಿದೇಶಗಳ ಜನಮನ ಸೂರೆಗೊಂಡಿತು. ಕರ್ನಾಟಕದ ಸಂಸ್ಕೃತಿಗೇ ಕಲಶಪ್ರಾಯವಾಯಿತು.

ಸುಮಾರು ಎರಡು ಸಾವಿರ ವರ್ಷಗಳ ಕಾಲ ನಡೆದ ರಾಜರುಗಳ ಆಳ್ವಿಕೆ, ಒಂದು ಭವ್ಯ, ದಿವ್ಯ ಪರಂಪರೆಯನ್ನು ಬೆಳೆಸಿ, ಕರ್ನಾಟಕಕ್ಕೆ, ಕನ್ನಡಿಗರಿಗೆ, ಜಗತ್ತಿನ ದೃಷ್ಟಿಯಲ್ಲಿ ಹೆಮ್ಮೆ ಪಡುವಂತಹ ಇತಿಹಾಸವನ್ನು ನೀಡಿದೆ. ▪ (ಈ ಲೇಖನ ಮಾಲೆಯು ಸಮಾಪ್ತಿಯಾಯಿತು)

ಮುಗಿಸುವ ಮುನ್ನ...

ಐಹೊಳೆಯ ದುರ್ಗಾ ದೇಗುಲ

ಇಂದಿನ ವರ್ತಮಾನವೇ ಮುಂದಿನ ಇತಿಹಾಸ: "ಚಂದ್ರಗೆ ತೆರಳುವ ಈ ಕಾಲದಲಿ ಚಂದ್ರಗುಪ್ತನ ಕಥೆಯೇಕೆ", ಇದು ಒಂದು ಚಿತ್ರಗೀತೆಯ ನಡುವಲ್ಲಿ ಬರುವ ಸಾಲು. ಹೌದು ಚರಿತ್ರೆಯೆಂದರೆ ಮೂಗು ಮುರಿಯುವವರೇ ಹೆಚ್ಚು. ಒಮ್ಮೆ ಯೋಚಿಸಿ ನೋಡಿ, ಇಂದಿನ ವರ್ತಮಾನವೇ ಮುಂದಕ್ಕೆ ಇತಿಹಾಸ. ಇಂದು ಮನುಷ್ಯ ಮಾಡುವ ವೈಜ್ಞಾನಿಕ ಅವಿಷ್ಕಾರಗಳು, ಬೆರಗು ಹುಟ್ಟಿಸುವಂತೆ ನಿರ್ಮಿಸುವ ಕಟ್ಟಡ, ಸೇತುವೆ, ಸಂಚಾರ ಮಾರ್ಗಗಳು, ಭಯಂಕರ ಯುದ್ಧ ಶಸ್ತ್ರಾಸ್ತ್ರಗಳು, ಇತ್ಯಾದಿ ಎಲ್ಲವೂ ದಿನದಿನಕ್ಕೂ ಹೊಸಹೊಸ ವಿನ್ಯಾಸ, ತಂತ್ರಜ್ಞಾನದಿಂದ ಮೈದಳೆಯುತ್ತಿರುತ್ತದೆ. ಪ್ರತಿಯೊಂದು ಅವಿಷ್ಕಾರದ ಹಿಂದೆಯೂ, ಎಷ್ಟೊಂದು ಜನರ ಜ್ಞಾನ, ಪರಿಶ್ರಮ, ಹಣ ಎಲ್ಲವೂ ವ್ಯಯವಾಗಿರುತ್ತದೆ.

ಹಾಗೆ ಪ್ರತಿ ಹೊಸದೊಂದು ಗೆಲುವನ್ನು ಸಾಧಿಸಿದಾಗಲೂ, ಹೊಸದೊಂದು ಸಾಧಿಸಿದ ಹೆಮ್ಮೆ, ಎಷ್ಟು ಮುನ್ನಡೆದಿದ್ದೇವೆಂಬ ಮನೋಭಾವ, ಸಾಧಿಸಿರುವುದನ್ನು ಜಗತ್ತಿಗೆಲ್ಲ ತೋರಿಸಿ ಮೆರೆಯುವ ಸಂಭ್ರಮ. ಎಲ್ಲವೂ ಸತ್ಯ,ಆದರೆ, ಮುಂದೆ ಕೆಲವೇ ದಿನಗಳಲ್ಲೇ ಅದು ಇತಿಹಾಸ, ಮತ್ತೊಂದು ಹೊಸ ಆಗಮನ, ಇದೇ ಚರಿತ್ರೆ. ಆದರೆ ಚರಿತ್ರೆಯಾಗುವ ವಸ್ತುವಿನ ಆಧಾರದಿಂದಲೇ ಹೊಸತರ ಪ್ರೇರೇಪಣೆ ಮತ್ತು ವಿಕಾಸ. ಇದು ಅನಾದಿಯಿಂದ ಪುನರಾವರ್ತನೆಯಾಗುತ್ತಲೇ ಇದೆ. ಅಂದಿನ ರಚನೆಗಳು, ನಿರ್ಮಾಣಗಳು, ಕಲೆ, ಗಣಿತ, ಖಗೋಳ, ವಿಜ್ಞಾನ, ಸಾಹಿತ್ಯ ಎಲ್ಲವೂ ಇಂದಿಗೂ ಅಚ್ಚರಿ ಮೂಡಿಸುತ್ತವೆ. ಕೆಲವೊಂದು ರಹಸ್ಯಗಳನ್ನು ಇಂದಿಗೂ ಅರಿಯಲಾಗುತ್ತಿಲ್ಲ.

ಕರ್ನಾಟಕದಲ್ಲೇ ಹೇಳುವುದಾದರೆ, ಕನ್ನಡ ಬಾಷೆಯ ಉಗಮ ಹಾಗೂ ವಿಕಾಸ, ಐಹೊಳೆಯ ಶಿಲ್ಪ ಕಾರ್ಯಾಗಾರ, ಬಾದಾಮಿಯ ಗುಹಾಂತರ್ದೇವಾಲಯ, ಬೇಲೂರು ಹಳೆಯ ಬೀಡುಗಳ ಕಲಾ ವೈಭವ, ಸರ್ವತೋಮುಖ ಸಮೃದ್ಧಿಯ ವಿಜಯನಗರ, ಗೋಲ ಗುಂಬಜ಼ದ ಶ್ರೇಷ್ಠಮಟ್ಟದ ತಂತ್ರಜ್ಞಾನ, ಚಿತ್ರದುರ್ಗದ ಕೋಟೆ, ಟಿಪ್ಪುವಿನ ಕ್ಷಿಪಣಿಗಳ ಬಳಕೆ, ಮೈಸೂರಿನ ಚಿತ್ರಕಲೆ, ಹೀಗೆ ಅನೇಕಾನೇಕ, ಒಂದಕ್ಕಿಂತ ಒಂದು ಅದ್ಭುತವೆನಿಸುವ ಕೊಡುಗೆಗಳು ಇತಿಹಾಸದಲ್ಲಿವೆ. ಇವುಗಳನ್ನು ಗುರುತಿಸುವ, ಅವುಗಳ ಹಿನ್ನೆಲೆ, ಅವುಗಳ ಹಿಂದಿರುವ ಶ್ರಮ ಇವುಗಳನ್ನು ಅರಿತುಕೊಳ್ಳುವುದೇ ಇತಿಹಾಸ.

ಓದುತ್ತಾ ಹೋದಂತೇ,ಅಚ್ಚರಿ ಮೂಡಿಸುವಂತಹ ವಿಷಯಗಳು ಇತಿಹಾಸದಲ್ಲಿ ದೊರಕುತ್ತವೆ, ಈಗ ನನಗಾಗಿದ್ದು ಸಹ ಅದೇ. ರಾಜವಂಶಗಳು ಲೇಖನವನ್ನು ಮೂರ್ನಾಲ್ಕು ಕಂತುಗಳಲ್ಲಿ ಬರೆದು, ಪುಟ್ಟದಾಗಿ ಕರ್ನಾಟಕ ಇತಿಹಾಸದ ಪರಿಚಯ ಮಾಡಿಕೊಡ ಬೇಕೆಂದಿದ್ದಿದ್ದೆ. ಹತ್ತು ಕಂತುಗಳೇ ಆಯಿತು, ಆದರೂ ಹೇಳಿದ್ದು ಏನೇನೂ ಸಾಲದೆನಿಸುತ್ತದೆ. ಪ್ರತಿಯೊಂದು ಕಂತನ್ನೂ ಓದಿ, ವಿಮರ್ಶಿಸಿ, ಪ್ರೊತ್ಸಾಹಿಸಿದ ಚೆಲುಮೆಯ ಸಂಪಾದಕ ಸಮಿತಿಗೆ ಹಾಗೂ ಓದುಗರಿಗೆ ನನ್ನ ವಂದನೆಗಳು. ಡಾ. ಸೂರ್ಯನಾಥ ಕಾಮತ್ ರ "ಕರ್ನಾಟಕದ ಸಂಕ್ಷಿಪ್ತ ಇತಿಹಾಸ" ಪುಸ್ತಕವೇ ಈ ನನ್ನ ಲೇಖನ ಮಾಲೆಗೆ ಪ್ರೇರಣೆ, ಮತ್ತು ಅದರೊಂದಿಗೆ ಹಲವು ಅಂತರ್ಜಾಲ ಕ್ಷೇತ್ರಗಳೂ ಈ ನನ್ನ ಲೇಖನ ಮಾಲೆಗೆ ಆಧಾರ.

"ಹೊರನಾಡ ಚೆಲುಮೆ" ಬಳಗದ ಹೆಮ್ಮೆಯ ಲೇಖಕರಾದ ಶ್ರೀ ನಾಗಶೈಲ ಕುಮಾರ್ ಅವರಿಗೆ ಸಂಪಾದಕ ಸಮಿತಿಯು ಧನ್ಯವಾದಗಳನ್ನು ಅರ್ಪಿಸುತ್ತದೆ. ನಿಮಗಿರುವ ಸಾಹಿತ್ಯದ ಕಸುವು ಇನ್ನೂ ಹೆಚ್ಚಾಗಲಿ ಎಂದು ಹಾರೈಸುತ್ತೇವೆ.

ಕನ್ನಡದ ಒಂದು ಕಾಯಕಕ್ಕೆ ಕೈ ಜೋಡಿಸಿ

ನೊಂದಾಯಿಸಲು ಮಿಂಚಂಚೆ ವಿಳಾಸ -sugamakannada@gmail.com

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ, ಕಗ್ಗ, ಗಮಕ, ಹರಿದಾಸ ಸಾಹಿತ್ಯಗಳು ಕೆಲವು ಪ್ರಮುಖ ಪ್ರಾಕಾರಗಳು. ಇವುಗಳಲ್ಲಿ ಭಗವಂತನ ನಾಮಸ್ಮರಣೆಯಷ್ಟೇ ಅಲ್ಲದೆ, ವಚನಗಳು ತಮ್ಮ ಸರಳ ನುಡಿಯಲ್ಲಿ ಅನುಭವದ ಅರಿವು ನೀಡುವಲ್ಲಿ ನೆರವಾದರೆ, ಹರಿದಾಸ ಸಾಹಿತ್ಯವು ಸಂಗೀತ ಮತ್ತು ಸೊಬಗಿನ ಸಾಹಿತ್ಯದ ಮಿಲನವಾಗಿದೆ. ಕಗ್ಗ, ತ್ರಿಪದಿ,ಷಟ್ಪದಿಗಳು ಅರ್ಥಪೂರ್ಣ ವಿಚಾರಗಳಿಂದ ಕೂಡಿ ಜೀವನದರ್ಶನ ಹಾಗೂ ವಿಚಾರಪೂರ್ಣ ವಿಷಯಗಳಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನ ಎಂದಿಗೂ ಝಗಝಗಿಸುವ ಕೊಡುಗೆಗಳಾಗಿವೆ.

ಅಂತರ್ಜಾಲದ ಈ ಮಹಾ ಜಗತ್ತಿನಲ್ಲಿ ಈಗ ಸಾಕಷ್ಟು ಕನ್ನಡಿಗರು ಕರ್ನಾಟಕದಿಂದ ಹೊರಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅವರೆಲ್ಲರಿಗೂ ಅಲ್ಲದಿದ್ದರೂ ಆಸಕ್ತರಿಗೆ ನೆನೆದಾಗ ಬೆರಳಂಚಿನಲ್ಲೇ ಒಂದೇ ಕಡೆ ಕೈಗೆಟಕುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸುಗಮ ಕನ್ನಡ.ಕಾಂ ಅಂತರ್ಜಾಲ ಕ್ಷೇತ್ರದಲ್ಲಿ ಸುಪ್ರಸಿದ್ಧ ಶರಣರ ವಚನಗಳು, ದಾಸರ ಪದಗಳು, ಕಗ್ಗ, ತ್ರಿಪದಿಗಳು ಹೀಗೆ ಇನ್ನೂ ಅನೇಕ ರಚನೆಗಳನ್ನು ಸಂಗ್ರಹ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ತಮ್ಮಗಳ ಸಹಾಯ ಬೇಕಾಗಿದೆ. ತಮಗೆ ಕನ್ನಡ ಬೆರಳಚ್ಚು ಮಾಡಲು ಸಾಧ್ಯವಿದ್ದಲ್ಲಿ, ಈ ಕಲಸ ಆದಂತೇ ಎಂದುಕೊಳ್ಳಿ. ಪ್ರತಿ ವಿಭಾಗದಲ್ಲೂ ಸಾವಿರಕ್ಕೂ ಮೀರುವಂತೆ ಕೃತಿಗಳ ಕಲೆ ಹಾಕುವ ಯೋಚನೆ ಇದೆ. ಈ ಕೆಲಸಕ್ಕೆ ಗರಿಷ್ಟ ಮಿತಿಯಿಲ್ಲದಂತೆ ಹೆಗಲುಕೊಟ್ಟು ನೀವು ಸಹಾಯ ನೀಡಬಹುದು.ನಿಮ್ಮಲ್ಲಿ ಹೆಚ್ಚಿನ ಕನ್ನಡ ಅಭಿಮಾನವಿದ್ದಷ್ಟೂ ಹೆಚ್ಚಿನ ಸಹಾಯ ಸಾಧ್ಯವೆಂಬ ನಂಬಿಕೆ ನಮ್ಮದು. ೩೧ ಆಗಸ್ಟ್ ೨೦೧೫ ರೊಳಗೆ ಈ ಕಾಯಕ ಮುಗಿಸಿ, ಆಸಕ್ತರಿಗೆ ಲಭ್ಯವಾಗಿಸುವ ಆಸೆ ನಮ್ಮದು.

ಸಿಡ್ನಿ ಕನ್ನಡ ಶಾಲೆಯಿಂದ ಈಗಾಗಲೇ ಉತ್ತೀರ್ಣರಾದ ಮಕ್ಕಳೂ, ಸಿಡ್ನಿ ಕನ್ನಡ ಶಾಲೆಯ ಶಿಕ್ಷಕರೂ, ಆಸ್ಟ್ರೇಲಿಯಾದಲ್ಲಿ ಈಗಾಗಲೇ ಕನ್ನಡ ಟೈಪಿಂಗ್ ಮಾಡಲು ಕಲಿತವರೂ,ಪ್ರಪಂಚದ ನಾನಾ ಕಡೆಯಿಂದ ಹೊರನಾಡ ಚೆಲುಮೆಯ ಓದುಗರೂ, ಬರಹಗಾರರೂ ಸಹ ತಮ್ಮ ಕೈ ಜೋಡಿಸಿದ್ದಾರೆ.

ಸಹಾಯ ಹೇಗೆ?

೧.ಮೊದಲು ಆಸಕ್ತರು ಈ-ಮೈಲ್ ಮೂಲಕ ತಮ್ಮ ಹೆಸರು ನೊಂದಾಯಿಸಿಕೊಳ್ಳುವುದು.

೨.ಸುಪ್ರಸಿದ್ಧ ರಚನಕಾರರ ವಚನ, ದಾಸರ ಪದಗಳು, ಕಗ್ಗ, ತ್ರಿಪದಿಗಳು ಇವುಗಳಲ್ಲಿ ಸುಮಾರು ನಾಲ್ಕೈದು ಪುಟಗಳಷ್ಟು ತಮಗೆ ಈ-ಮೈಲ್ ಮೂಲಕ ಕಳುಹಿಸಿಕೊದಲಾಗುವುದು.

೩.ಅದನ್ನು ತಾವು ಬರಹ-ಯೂನಿಕೋಡ್ ಅಥವಾ ಗೂಗಲ್ ಸಹಾಯದಿಂದ ಟೈಪ್ ಮಾಡಿ ನಮಗೆ ಕಳುಹಿಸುವುದು.

೪.ಅವುಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ ನಂತರ ಸಹಾಯ ಮಾಡಿದ ಎಲ್ಲರ ಹೆಸರನ್ನೂ ಶಾಶ್ವತವಾಗಿ ಮುದ್ರಿಸಲಾಗುವುದು. ಅತಿ ಹೆಚ್ಚು ನೆರವು ನೀಡಿದವರಿಗೆ ಕನ್ನಡ ಶಾಲೆಯ ಕಡೆಯಿಂದ ಉಡುಗೊರೆ ಖಚಿತ.

ನೊಂದಾಯಿಸಲು ಮಿಂಚಂಚೆ ವಿಳಾಸ - sugamakannada@gmail.com

ಶುಂಠಿ ಕಷಾಯ

ಬೇಲೂರು ರಾಮಮೂರ್ತಿ

ಯಾವುದೋ ಸಮಾರಂಭಕ್ಕೆಂದು ಶ್ರೀನಿವಾಸನ ಕುಟುಂಬ ಸಿದ್ದವಾಗುತ್ತಿತ್ತು. ಒಳ್ಳೆಯ ಕೆಲಸಕ್ಕೆಂದು ಹೊರಟಿರುವಾಗ ಮನಸ್ಸು ಒಳ್ಳೆಯದೇ ಇರಬೇಕು. ಸುಮ್ಮನೇ ಮುಖ ಗಂಟುಹಾಕಿಕೊಳ್ಳುವುದು, ಬೇಜಾರು ಮಾಡಿಕೊಳ್ಳೋದು ಇವೆಲ್ಲ ಬೇಡ ಅಂದುಕೊಂಡಿದ್ದ. ಶ್ರೀನಿವಾಸ ಅಂಥಾ ಸಿಡುಕನೇನೂ ಅಲ್ಲ. ಆದರೆ ಅವನ ಮನಸ್ಸಿಗೆ ಹಿಡಿಸದ ಸಂಗತಿ ನಡೆದರೆ ಏಕ್‌ದಂ ಸಿಟ್ಟಿಗೇಳುತ್ತಾನೆ. ಹನ್ನೊಂದು ಗಂಟೆಗೆ ಸರಿಯಾಗಿ ನಾವು ಮನೆ ಬಿಡಬೇಕು. ಅಲ್ಲಿಗೆ ಹೋಗೋಕೆ ಅರ್ಧ ಗಂಟೆಯಾದರೂ ಬೇಕು. ನೀನು ಕಡೇ ಘಳಿಗೆಯಲ್ಲಿ ತಡ ಮಾಡಬೇಡ ಅಂತ ಹೆಂಡತಿಗೆ ಸಾರಿ ಸಾರಿ ಹೇಳಿದ್ದ. ಹೆಂಡತಿ ಪರಿಮಳ ಎಲ್ಲ ಹೆಣ್ಣುಗಳಂತೆಯೇ ಸ್ವಲ್ಪ ಬೇಗೆ ಸ್ವಲ್ಪ ನಿಧಾನ ಸ್ವಲ್ಪ ಆತುರ, ಸ್ವಲ್ಪ ಸಾವಧಾನ ಅನ್ನೋ ತರಹದ ಹೆಣ್ಣು. ಆದರೆ ಅವತ್ತು ಶ್ರೀನಿವಾಸ ಹೇಳಿದ ಹಾಗೆಯೇ ಬೇಗ ಬೇಗ ರೆಡಿಯಾದಳು. ಮಕ್ಕಳು ಪುಷ್ಪ ಮತ್ತು ಗಿರಿ ಇಬ್ಬರೂ ಆಗಲೇ ಸಿದ್ಧವಾಗಿದ್ದರು. ಹನ್ನೊಂದು ಗಂಟೆಗೆ ಇನ್ನೂ ಐದು ನಿಮಿಷ ಇರೋ ಹಾಗೆಯೇ ಎಲ್ಲರೂ ಮನೆಯಿಂದ ಹೊರಗೆ ಬಂದರು. ಮನೆ ಎದುರಿಗೆ ಭಿಕ್ಷುಕ ನಿಂತು ದೈನ್ಯದಿಂದ ಅಣ್ಣಾ ಏನಾದರೂ ಹಾಕಿ ಅಣ್ಣಾ ಅಂದು ತನ್ನ ಅಲ್ಯುಮಿನಿಯಂ ತಟ್ಟೆ ಮುಂದಿಟ್ಟ. ಭಿಕ್ಷುಕನನ್ನು ನೋಡಿ ಶ್ರೀನಿವಾಸನಿಗೆ ಎಲ್ಲಿಲ್ಲದ ಸಿಟ್ಟು ಬಂತು. ಅವನನ್ನು ಬಾಯಿಗೆ ಬಂದ ಹಾಗೆ ಬೈದ. ಪರಿಮಳ ಸುಮ್ನೆ ಕೂಗಿ ನೀವ್ಯಾಕೆ ಮನಸ್ಸು ಹಾಳು ಮಾಡ್ಕೊತೀರ ಸುಮ್ಮನೇ ಬನ್ನಿ ಹೋಗೋಣ ಅಂದಳು. ಒಳ್ಳೇ ಕೆಲಸಕ್ಕೆ ಹೊರಟಿರುವಾಗ ಈ ದರಿದ್ರದವನ ಮುಖ ನೋಡೋ ಹಾಗಾಯ್ತಲ್ಲ. ಈ ಭಿಕ್ಷುಕರಿಗೆ ಬೇರೆ ಸಮಯವೇ ಇಲ್ಲ ಅಂತ ಮತ್ತೆ ಕೂಗಾಡಿದ. ಇವರ ಕೂಗಾಟ ನನಗೆ ಅಲ್ಲವೇ ಅಲ್ಲ ಅಂತ ಭಿಕ್ಷುಕ ಅವ್ವಾ ನೀವಾದ್ರೂ ಏನಾದ್ರೂ ಕೊಡಿ ತಾಯೀ ಬೆಳಗ್ಗೆಯಿಂದ ಏನೂ ತಿಂದಿಲ್ಲ ಅಂದು ಮತ್ತೆ ತಟ್ಟೆ ಮುಂದೆ ಹಿಡಿದ. ಶ್ರೀನಿವಾಸ ಆತುರಾತುರದಿಂದ ಮನೆಗೆ ಬೀಗ ಹಾಕಿ ಹೊರಟ. ಹೆಂಡತಿ ಎಚ್ಚರಿಸಿದ್ದರಿಂದ ಮತ್ತೆ ಕೂಗಾಡಲಿಲ್ಲ. ಆದರೂ ಅವನಿಗೆ ಮನಸ್ಸು ಕೆಟ್ಟು ಹೋಗಿತ್ತು. ಭಿಕ್ಷುಕ ಅಂದ್ರೆ ಬೇಡೋದೇ ಅವನ ಕೆಲಸ. ಅವನಿಗೆ ಹೊತ್ತು ಗೊತ್ತು ಏನೂ ಇಲ್ಲ. ಯಾರನ್ನು ಬೇಡಬೇಕು, ಯಾವಾಗ ಬೇಡಬೇಕು, ಏನನ್ನು ಬೇಡಬೇಕು ಇವೆಲ್ಲ ಅವರಿಗೆ ಬೇಡದ ವಿಚಾರ. ಏನಾದರೂ ಸರಿ, ಎಷ್ಟಾದರೂ ಸರಿ ಸಿಕ್ಕರೆ ಸಾಕು ಅಂತ ಅವರ ಕಾತುರ.

ಕಾರಿನಲ್ಲಿ ಹೋಗುವಾಗ ಶ್ರೀನಿವಾಸನ ಸಿಟ್ಟು ಇನ್ನೂ ಇಳಿದಿರಲಿಲ್ಲ. ಪರಿಮಳ ಗಂಡನ ಕೋಪ ಶಮನವಾಗಲಿ ಅಂತ ಮಾತಾಡಿಸಲಿಲ್ಲ.

ಹೋದ ಕೆಲಸಕ್ಕೆ ಏನು ತೊಂದರೆಯಾಗಲಿಲ್ಲ. ಭಿಕ್ಷುಕ ಮನೆ ಮುಂದೆ ಬಂದಿದ್ರಿಂದ ಹೀಗಾಯ್ತು ಅಂತ ಅಂದುಕೊಳ್ಳುವಂಥಾದ್ದು ಏನೂ ನಡೆಯಲಿಲ್ಲ. ಹೋಗುವಾಗ ಸಿಟ್ಟಿನಿಂದ ಹೊರಟಿದ್ದ ಶ್ರೀನಿವಾಸ ವಾಪಸ್ ಬರುವಾಗ ನೆಮ್ಮದಿಯಿಂದಿದ್ದ.

ಆದರೆ ಮನೆ ಮುಂದೆ ಕಾರು ನಿಂತ ತಕ್ಷಣ ಮತ್ತೆ ಅವನ ಸಿಟ್ಟು ನೆತ್ತಿಗೇರಿತು. ಏಕೆಂದರೆ ಆ ಭಿಕ್ಷುಕ ಇನ್ನೂ ಅಲ್ಲೇ ಇದ್ದ. ಇವನು ನಾವು ಬರೋದನ್ನೇ ಕಾಯ್ದುಕೊಂಡಿದ್ದು ಮತ್ತೆ ಭಿಕ್ಷೆ ಬೇಡೋಕೆ ಸಿದ್ದವಾಗಿದಾನೆ ಅಂತ ಶ್ರೀನಿವಾಸನಿಗೆ ರೇಗಿತು. ಶ್ರೀನಿವಾಸ ದೊಡ್ಡ ಕಂಠದಿಂದ ಭಿಕ್ಷುಕನನ್ನು ಬೈಯೋಕೆ ಷುರು ಮಾಡಿದಾಗ ಭಿಕ್ಷುಕ "ಒಂದ್ನಿಮಿಷ ಸ್ವಾಮಿ" : ನೀವು ಭಿಕ್ಷೆ ಕೊಟ್ಟರೂ ಸಂತೋಷನೇ ಕೊಡದಿದ್ದರೂ ಸಂತೋಷನೇ ನಮ್ಮಂಥವರು ಕೋಪ ಮಾಡ್ಕೊಬಾರದು ಎನ್ನೋದು ನಿಯಮ. ನೀವು ಏನೇ ಬೈದರೂ ನನಗೆ ಕೋಪ ಇಲ್ಲ. ಆದರೆ ನಾನು ಇನ್ನೂ ಇಲ್ಲೇ ಯಾಕೆ ಕೂತಿದೀನಿ ಅಂದ್ರೆ ನೀವು ನನ್ನನ್ನು ಬೈದು ಆತುರದಲ್ಲಿ ಹೋಗುವಾಗ ಮನೆಗೆ ಸರಿಯಾಗಿ ಬೀಗ ಹಾಕೇ ಇಲ್ಲ. ಸುಮ್ಮನೇ ಬೀಗ ಚಿಲಕಕ್ಕೆ ತಗುಲಿಕೊಂಡಿದೆ ಅಷ್ಟೆ. ಇದನ್ನು ನೋಡಿಕೊಂಡು ಯಾರಾದರೂ ಮನೆ ದೋಚಬಹುದು ಅಂತ ನಾನು ಇಲ್ಲೇ ಕಾಯ್ತಿದ್ದೆ. ಅಂಥದೇನಾದ್ರೂ ಆದ್ರೆ ನಾನು ನಿಮ್ಮ ಮೊಬೈಲ್‌ಗೆ ಕರೆ ಮಾಡ್ತಿದ್ದೆ ಅಂದ. ಶ್ರೀನಿವಾಸ, ಪರಿಮಳ ಮಕ್ಕಳು ಎಲ್ಲರೂ ಗಾಬರಿಯಿಂದ ಮನೆ ಬಾಗಿಲಿನತ್ತ ನೋಡಿದರೆ ಭಿಕ್ಷುಕ ಹೇಳಿದ್ದು ಸರಿ ಬೀಗ ಸುಮ್ಮನೇ ಚಿಲಕಕ್ಕೆ ತಗುಲಿಕೊಂಡಿದೆ ಅಷ್ಟೆ. ಆತುರದಿಂದ ಎಲ್ಲರೂ ಒಳಗೆ ಹೋಗಿ ಏನೂ ಕಳ್ಳತನ ಆಗಿಲ್ಲ ಅಂತ ಖಾತರಿಪಡಿಸಿಕೊಂಡು ಮತ್ತೆ ಹೊರಬಂದರು. ಶ್ರೀನಿವಾಸ ನೀನು ನನ್ನ ಮೊಬೈಲ್‌ಗೆ ಕರೆ ಮಾಡ್ತೀನಿ ಅಂದ್ಯಲ್ಲ ನನ್ನ ಮೊಬೈಲ್ ನಂಬರ್ ನಿನಗೆ ಹೇಗೆ ಗೊತ್ತು ಅಂತ ಕೇಳಿದ್ದಕ್ಕೆ ಭಿಕ್ಷುಕ ಹೋದ ವಾರ ನಾನು ಹೀಗೆ ಭಿಕ್ಷೆ ಕೇಳೊಕೆ ಬಂದಿದ್ದಾಗ ನೀವು ಯಾರತ್ರನೋ ಮಾತಾಡ್ತಾ ವಿಷಯ ತಿಳಿದ ಕೂಡಲೆ ನನ್ನ ಈ ನಂಬರ್ ಗೆ ಕರೆ ಮಾಡು ಅಂತ ಹೇಳ್ತಿದ್ರಲ್ಲ ಆಗ ನಾನು ಆ ನಂಬರನ್ನು ಗುರುತು ಹಾಕಿಕೊಂಡಿದ್ದೆ ಅಂದ. ಶ್ರೀನಿವಾಸನಿಗೆ ಏನು ಹೇಳಬೇಕೆಂದೇ ತಿಳಿಯದೇ ತಲೆ ತಗ್ಗಿಸಿದ. ಭಿಕ್ಷುಕ ಅಲ್ಲಿಂದ ಹೊರಟಾಗ ಪರಿಮಳ ಓಡಿಬಂದು ಒಂದ್ನಿಮಿಷ ನಿಂತ್ಕೋಪ್ಪ ಅಂದು ಅವನಿಗೆ ತಿಂಡಿ ಕೊಟ್ಟು ಒಂದು ನೂರು ರೂಪಾಯ್ನೂ ಕೊಟ್ಟು ನಾಳೆಯಿಂದ ದಿನಾ ಹನ್ನೆರಡೂವರೆಗೆ ಬಾಪ್ಪ ಅಷ್ಟೊತ್ತಿಗೆ ಅಡಿಗೆ ಆಗಿರುತ್ತೆ ಅಂದಳು. ಭಿಕ್ಷುಕ ಯಾವ ಬಿಗುಮಾನವನ್ನೂ ಮಾಡದೇ ಕೊಟ್ಟ ತಿಂಡಿ ದುಡ್ಡು ಎಲ್ಲವನ್ನೂ ತೆಗೆದುಕೊಂಡು ಇಬ್ಬರಿಗೂ ನಮಸ್ಕರಿಸಿ ಹೊರಟ.

ಭಿಕ್ಷುಕನನ್ನೇ ನೋಡುತ್ತಿದ್ದ ಶ್ರೀನಿವಾಸ ಈ ಬದುಕಿನಲ್ಲಿ ಏನು ಬೇಕಾದರೂ ಆಗಬಹುದು ಎಂದುಕೊಂಡ.

(ಕೃಪೆ : ಅಪರಂಜಿ) ▪

ವಿಜ್ಞಾನ

ನೀರಿನ ಒತ್ತಡ

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ಎರಡು ಟಿನ್ ಡಬ್ಬಗಳು (ಉದಾ: ಸಾಫ್ಟ್ ಡ್ರಿಂಕ್ಸ್ ಕ್ಯಾನ್)
- ಚೂಪಾದ ಸಾಧನ (ಉದಾ: ಮೊಳೆ, ಸ್ಕ್ರೂ ಡ್ರೈವರ್)
- ನೀರು



ವಿಧಾನ:

- ಚಿತ್ರದಲ್ಲಿ ತೋರಿಸಿರುವಂತೆ ಡಬ್ಬಕ್ಕೆ ರಂಧ್ರ ಮಾಡಿ
  - ಡಬ್ಬ ೧. ಕೆಳಮಟ್ಟದಲ್ಲಿ ಸುತ್ತಲೂ ಅಲ್ಲಲ್ಲಿ ರಂಧ್ರ ಮಾಡಿ.
  - ಡಬ್ಬ ೨. ಕೆಳಗಿಂದ ಮೇಲಕ್ಕೆ ನೇರವಾಗಿ ಅಲ್ಲಲ್ಲಿ ರಂಧ್ರ ಮಾಡಿ
- ಸಿಂಕ್ ಬಳಿ ಇಟ್ಟುಕೊಂಡು ಎರಡೂ ಡಬ್ಬದ ತುಂಬ ನೀರು ತುಂಬಿಸಿ, ನೀರು ಹೇಗೆ ಹರಿಯುವುದು ಎಂಬುದನ್ನು ಗಮನಿಸಿ.

ಏನಾಗುತ್ತಿದೆ:

ನೀರಿನ ಒತ್ತಡ ಹೇಗಿರುತ್ತದೆ ಎನ್ನುವುದನ್ನು ಈ ಪ್ರಯೋಗವು ವಿವರಿಸುತ್ತದೆ. ಡಬ್ಬ ೧ ರಲ್ಲಿ ಕೆಳಮಟ್ಟದಲ್ಲಿ ರಂಧ್ರ ಮಾಡಿರುವುದರಿಂದ ತುಂಬಿಕೊಂಡಿರುವ ನೀರಿನ ಸಂಪೂರ್ಣ ಒತ್ತಡ ಬಿದ್ದು ನೀರು ಹೆಚ್ಚು ರಭಸದಿಂದ ಹೊರ ಬರುತ್ತದೆ.

ಡಬ್ಬ ೨ ರಲ್ಲಿ ಹಲವು ರಂಧ್ರಗಳಿದ್ದು, ಮೇಲಿನ ರಂಧ್ರಗಳಲ್ಲಿ ಅಷ್ಟು ರಭಸದಿಂದ ನೀರು ಬರುವುದಿಲ್ಲ. ಕೆಳಕ್ಕೆ ಹೋದಂತೆ ನೀರಿನ ಒತ್ತಡವು ಹೆಚ್ಚಿ, ಆ ಒತ್ತಡವು ನೀರನ್ನು ರಂಧ್ರದ ಮೂಲಕ ಹೆಚ್ಚು ರಭಸವಾಗಿ ಹೊರಬರುವಂತೆ ಮಾಡುತ್ತದೆ.

ನೀರಿನ ಒತ್ತಡ ಉಪಯೋಗಿಸಿ ಅನೇಕ ಅನೂಕೂಲಗಳನ್ನು ಮಾಡಿಕೊಂಡಿರುತ್ತೇವೆ. ನೀರಿಗೆ ಅಣೆಕಟ್ಟು ಕಟ್ಟಿ ನೀರನ್ನು ಶೇಖರಿಸಿ, ಅಣೆಕಟ್ಟಿನ ಕೆಳಮಟ್ಟದಿಂದ ನೀರನ್ನು ಪೈಪ್ ಮೂಲಕ ಹರಿಸಿ ವಿದ್ಯುಚ್ಛಕ್ತಿ ಉತ್ಪಾದಿಸುತ್ತೇವೆ. ನಾವೆಲ್ಲಾ ನೋಡೇ ಇರುವ ಮತ್ತೊಂದು ಉದಾಹರಣೆ: ನಮ್ಮ ದೇಹಕ್ಕೆ ರಕ್ತ ಅಥವಾ ದ್ರವ ರೂಪದಲ್ಲಿ ಕೊಡುವ ಔಷದಿಯನ್ನು ಎತ್ತರದ ಸ್ಟ್ಯಾಂಡಿನಲ್ಲಿ ನೇತುಹಾಕಿರುತ್ತಾರೆ. ಉದ್ದೇಶ ಇಷ್ಟೇ. ಆ ದ್ರವವು ದೇಹದೊಳಕ್ಕೆ ಹೋಗಲು ಸೂಕ್ತವಾದ ಒತ್ತಡ ಸಿಗಲಿ ಎಂಬುದಕ್ಕಾಗಿ. ▪

ಜಾಣ ಕರ್ನಾಟಕ – ಉತ್ತರ

೧. ತನ್ನ ಆನೆಗೆ ಒದಗಿದ್ದ ಕಣ್ಣಿನ ತೊಂದರೆಯನ್ನು ನಿವಾರಿಸಲು ಟಿಪ್ಪು ಸುಲ್ತಾನ ಹರಸಿಕೊಂಡ ದೇವರು ನಂಜನಗೂಡಿನ ನಂಜುಂಡೇಶ್ವರ. ತೊಂದರೆ ನಿವಾರಣೆಯಾಗಿದ್ದಕ್ಕೆ ಆ ದೇವರನ್ನು ಹಕೀಮ್ ನಂಜುಂಡ ಎಂದು ಕರೆದ.

೨. ಬಾರತದ ಅತ್ಯಂತ ಹಳೆಯ ರೈಲು ಸೇತುವೆ ನಂಜನಗೂಡಿನಲ್ಲಿದೆ. ಇದನ್ನು ಕಬಿನಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. (ಇದನ್ನು ಸುಮಾರು ೧೭೩೫ ರಲ್ಲಿ ನಿರ್ಮಿಸಲಾಯಿತು. ೧೯೦೨ ರಿಂದ ೨೦೦೭ ರವರೆಗೆ ಈ ಸೇತುವೆಯ ಮೇಲೆ ರೈಲು ಸಂಚಾರವಿತ್ತು).

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸುಗಮ ಕನ್ನಡ ಕೂಟ

ಅದ್ದೂರಿ ದಸರಾ ಸಂಗೀತ ಸಂಜೆ

ಅಕ್ಟೋಬರ್ 31st 2015

ವಿವರಗಳು ಸದ್ಯದಲ್ಲೇ

Please keep the date free

ಸುಗಮ ಕನ್ನಡ ಕೂಟ

ನವೆಂಬರ್ 8th 2015 – ಸಿಡ್ನಿ ನಾಟಕೋತ್ಸವ

ಮೂರು ಕಿರು ನಾಟಕಗಳ ಪ್ರದರ್ಶನ

ವಿವರಗಳು ಸದ್ಯದಲ್ಲೇ

Please keep the date free

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.